ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಸೋಮವಾರ ನಡೆದ ಐಪಿಎಲ್ ಪಂದ್ಯದಲ್ಲಿ 3 ವಿಕೆಟ್ ಪಡೆದು ಸಂಭ್ರಮಿಸಿದ ಸನ್ ರೈಸರ್ಸ್ ಹೈದರಾಬಾದ್ ತಂಡದ ನಾಯಕ ಪ್ಯಾಟ್ ಕಮಿನ್ಸ್...ಚೆನ್ನೈ ಸೂಪರ್ ಕಿಂಗ್ಸ್ 180ಕ್ಕೆ 7 ವಿಕೆಟ್...

19 ಮೇ 2026 ಮಂಗಳವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 69 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ವಿದ್ಯೆಗೆ ವಿನಯವೇ ಭೂಷಣ, ಅಕ್ಷರಗಳಲ್ಲ... » 2



ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳಿಗಾಗಿ ಸ್ಪರ್ಧಾ ಕುಟೀರ ಪ್ರಾರಂಭಿಸಿ » 3




ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ : ಎನ್‌ಟಿಎ ರದ್ದುಗೊಳಿಸಲು ಆಗ್ರಹ » 4

# ಬಿಜೆಪಿ-ಜೆಡಿಎಸ್ ನಡುವೆ ಬಿಕ್ಕಟ್ಟು ಬರುವುದಿಲ್ಲ


## ಕ್ಲಿಷ್ಟ ಸಮಸ್ಯೆ ಬಂದರೂ ಬಗೆಹರಿಸಿಕೊಳ್ಳುವ ದೃಢ ವಿಶ್ವಾಸವಿದೆ: ಹೆಚ್.ಡಿ.ದೇವೇಗೌಡ

• ಪ್ರಜೋದಯ ವರದಿ

**ಬೆಂಗಳೂರು:** ಬಿಜೆಪಿ-ಜೆಡಿಎಸ್ ನಡುವೆ ಯಾವುದೇ ಬಿಕ್ಕಟ್ಟು ಬರುವುದಿಲ್ಲ. ಯಾವುದೇ ಕ್ಲಿಷ್ಟ ಸಮಸ್ಯೆ ಬಂದರೂ ಬಗೆಹರಿಸಿಕೊಂಡು ಹೋರಾಟ ಮುಂದುವರೆಸುವ ದೃಢ ವಿಶ್ವಾಸವಿದೆ ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಹೇಳಿದರು.

94ನೇ ಹುಟ್ಟುಹಬ್ಬದ ಪ್ರಯುಕ್ತ ಜೆ.ಪಿ. ನಗರದ ವೆಂಕಟೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾವು ಎನ್‌ಡಿಎ ಮೈತ್ರಿ ಕೂಟದಲ್ಲಿದ್ದೇವೆ. ಮೋದಿ, ಅಮಿತ್ ಶಾ ಅವರ ಜೊತೆ ನಮ್ಮ ಸಂಬಂಧವಿದೆ. ಇದರಲ್ಲಿ ಯಾವುದೇ ಬಿಕ್ಕಟ್ಟು ಬರುವುದಿಲ್ಲ. ಆ ಬಗ್ಗೆ ನನಗೆ ಯಾವುದೇ ಆತಂಕವಿಲ್ಲವೆಂದು ಸ್ಪಷ್ಟಪಡಿಸಿದರು.

ದಕ್ಷಿಣ ಭಾರತದಲ್ಲಿ ಈಗ ಕೇರಳ, ಕರ್ನಾಟಕ ಮತ್ತು ತೆಲಂಗಾಣದಲ್ಲಿ ಕಾಂಗ್ರೆಸ್ ತನ್ನದೇ ಆದ ಸರ್ಕಾರಗಳನ್ನು ಹೊಂದಿದೆ. ಭವಿಷ್ಯದಲ್ಲಿ ಏನಾಗುತ್ತದೆ ಎಂದು ನೋಡೋಣ, ನಾನು ಈಗ ಅದರ ಬಗ್ಗೆ ಮಾತನಾಡಲು



ಬಯಸುವುದಿಲ್ಲ. ಪಕ್ಷದ ನಾಯಕರು ಮತ್ತು ಕಾರ್ಯಕರ್ತರು ಶಿಸ್ತಿನ ಸಿಪಾಯಿಗಳಂತೆ ಪ್ರಾಮಾಣಿಕತೆಯಿಂದ ಪಕ್ಷವನ್ನು ಬಲಪಡಿಸುವತ್ತ ಕೆಲಸ ಮಾಡಬೇಕು. ಜೆಡಿಎಸ್ ರಾಜ್ಯಾಧ್ಯಕ್ಷ, ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ವಹಿಸುವ ಜವಾಬ್ದಾರಿಯನ್ನು ಶಾಸಕರು, ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ನಮ್ಮ ಪಕ್ಷದ ಕಾರ್ಯಕರ್ತರು ಮಾಡುವಂತೆ ಕರೆ ನೀಡಿದರು.

ಸ್ವೀಡನ್‌ನಿಂದ ಪ್ರಧಾನಿ ಮೋದಿ ಅವರಿಂದ ಹುಟ್ಟುಹಬ್ಬದ ಸಂದೇಶ ಬಂದಿದ್ದು, ಗೃಹ ಸಚಿವ ಅಮಿತ್ ಶಾ ಮತ್ತು ಹಿರಿಯ ಬಿಜೆಪಿ ನಾಯಕ ಬಿ.ಎಸ್.ಯಡಿಯೂರಪ್ಪ ದೂರವಾಣಿ ಮೂಲಕ ಶುಭಾಶಯ ಕೋರಿದ್ದಾರೆ. ಅದೇ ರೀತಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಸೇರಿ ಹಲವಾರು ರಾಜಕೀಯ ನಾಯಕರು ಹುಟ್ಟುಹಬ್ಬದ ಶುಭ ಕೋರಿದ್ದಾರೆಂದು ತಿಳಿಸಿದರು.

**ಗಣ್ಯರಿಂದ ಶುಭ ಹಾರೈಕೆ**

ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರು ಬೆಂಗಳೂರಿನ ಜೆ.ಪಿ.ನಗರದಲ್ಲಿರುವ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಪತ್ನಿ ಚೆನ್ನಮ್ಮ ಅವರೊಂದಿಗೆ ವಿಶೇಷ ಪೂಜೆ ಸಲ್ಲಿಸುವುದರೊಂದಿಗೆ ಹುಟ್ಟುಹಬ್ಬವನ್ನು ಆಚರಿಸಿಕೊಂಡಿದ್ದಾರೆ. ಈ ವೇಳೆ ಕುಟುಂಬದ ಸದಸ್ಯರು, ಜೆಡಿಎಸ್ ಪಕ್ಷದ ಮುಖಂಡರು ಮತ್ತು ಹಿತೈಷಿಗಳು ಉಪಸ್ಥಿತರಿದ್ದರು.

ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿ ಹಲವು ಗಣ್ಯರು ಹುಟ್ಟುಹಬ್ಬದ ಶುಭಾಶಯ ಕೋರಿದ್ದಾರೆ. ದೇವೇಗೌಡರ ದೀರ್ಘಾವಧಿಯ ರಾಷ್ಟ್ರ ಸೇವೆ, ನೀತಿ ನಿರ್ಣಯಗಳ ಬಗೆಗಿನ ಆಳವಾದ ತಿಳಿವಳಿಕೆ ಹಾಗು ಜನಪರ ಕಾಳಜಿಯನ್ನು ಶ್ಲಾಘಿಸಿ ಪ್ರಧಾನಿ ಶುಭ ಕೋರಿದ್ದಾರೆ.

ಹಿರಿಯ ರಾಜಕಾರಣಿಯಾಗಿರುವ ದೇವೇಗೌಡರಿಗೆ ಆಯುರಾರೋಗ್ಯ ಮತ್ತು ಮತ್ತಷ್ಟು ಕಾಲ ನಾಡಿನ ಜನರ ಸೇವೆ ಮಾಡುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶುಭ ಕೋರಿದ್ದಾರೆ.

**ವ್ಹೀಲ್‌ಚೇರ್‌ನಲ್ಲೇ ಕುಳಿತು ಹೋರಾಟ**

ವಯೋಸಹಜ ಆರೋಗ್ಯ ಸಮಸ್ಯೆಗಳಿದ್ದರೂ, ಸಾಧ್ಯವಾದಷ್ಟು ದಿನಗಳವರೆಗೆ ವ್ಹೀಲ್ ಚೇರ್‌ನಲ್ಲೇ ಕುಳಿತು ಸಾರ್ವಜನಿಕರ ಹಿತಕ್ಕಾಗಿ ಹೋರಾಡುವ ದೃಢ ಸಂಕಲ್ಪ ನನಗಿದೆ. 93 ವರ್ಷ ಪೂರೈಸಿದ್ದೇನೆಂದು ಹೇಳಿಕೊಂಡು ಮನೆಯಲ್ಲಿ ಕುಳಿತುಕೊಳ್ಳುವುದಿಲ್ಲ. ನನ್ನ 68 ವರ್ಷಗಳ ರಾಜಕೀಯ ಜೀವನದುದ್ದಕ್ಕೂ ಹೋರಾಡುತ್ತಿದ್ದೇನೆ. ಜನರು ಅದನ್ನು ಎಷ್ಟು ಗುರುತಿಸುತ್ತಾರೆಂದು ನನಗೆ ಚಿಂತೆ ಇಲ್ಲ, ಆದರೆ, ಜನರ ಹಿತಾಸಕ್ತಿಗಾಗಿ ಹೋರಾಡುವುದು ನನ್ನ ಮುಂದಿರುವ ವಿಷಯ, ನಾನು ನನ್ನ ಕೆಲಸವನ್ನು ಮಾಡುತ್ತೇನೆಂದು ದೇವೇಗೌಡರು ಹೇಳಿದರು.

# ಕಾಡಾನೆಗಳ ಕಾದಾಟದಲ್ಲಿ ಸಿಲುಕಿ ಮಹಿಳೆ ಸಾವು

• ಪ್ರಜೋದಯ ವರದಿ

**ಕೊಡಗು:** ಕುಶಾಲನಗರದ ದುಬಾರೆ ಆನೆ ಶಿಬಿರದಲ್ಲಿ ಸೋಮವಾರ ಎರಡು ಆನೆಗಳ ನಡುವೆ ಉಂಟಾದ ಕಾದಾಟದಲ್ಲಿ ಮಹಿಳೆಯೊಬ್ಬರು ಸಿಲುಕಿ ಮೃತಪಟ್ಟಿದ್ದು ಮಗು ಮತ್ತು ಅವರ ಪತಿ ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ.

ಚೆನ್ನೈ ಮೂಲದ ಜೋಯ್ಸಿ (33) ಮೃತರು. ಆನೆಗಳಿಗೆ ಸ್ನಾನ ಮಾಡಿಸುವ ಸಂದರ್ಭ ಅವುಗಳಿಗೆ ಆಹಾರ ಕೊಡುವುದು ಪ್ರವಾಸಿಗರಿಗೆ ಖುಷಿ ಕೊಡುವ ಸಂಗತಿ. ಇದೇ ರೀತಿ ತಮಿಳುನಾಡಿನಿಂದ ಬಂದಿದ್ದ ಜೋಯ್ಸಿ ಸಹ ಆನೆಗಳಿಗೆ ಸ್ನಾನ ಮಾಡಿಸುತ್ತಿದ್ದಾಗ ಆಹಾರ ಕೊಡುವುದಕ್ಕಾಗಿ ಅಲ್ಲಿಗೆ ಹೋಗಿದ್ದಾರೆ. ಈ ವೇಳೆ ಅಲ್ಲಿ ಪಳಗಿಸಿದ್ದ 2 ಆನೆಗಳು ಏಕಾಏಕಿ ಕಾದಾಟ ಆರಂಭಿಸಿವೆ. ಒಂದು ಆನೆ ಮತ್ತೊಂದು ಆನೆ ಮೇಲೆ ದಾಳಿ ಮಾಡಲು ಶುರು ಮಾಡಿದಾಗ ಅಲ್ಲಿದ್ದ ಪ್ರವಾಸಿಗರು ಭಯಪಟ್ಟು ಓಡಲು ಪ್ರಯತ್ನಿಸಿದ್ದಾರೆ. ಈ ಗೊಂದಲದ ನಡುವೆ ಜೋಯ್ಸಿ ಅವರು ಕೂಡ ಆತಂಕದಿಂದ ಓಡುವ ವೇಳೆ ಆಯಾತಪ್ಪಿ ನೀರಿನಲ್ಲಿ ಬಿದ್ದಿದ್ದಾರೆ. ಈ ವೇಳೆ ಅವರನ್ನು ರಕ್ಷಿಸುವುದು ಕಷ್ಟವಾಗಿದೆ. ಸತತ ಪ್ರಯತ್ನದ ಬಳಿಕ ಅವರನ್ನು ಹೊರತೆಗೆದು ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಿಸಲಿಲ್ಲ.

ಘಟನೆ ಕುರಿತು ವಿಷಾದ ವ್ಯಕ್ತಪಡಿಸಿರುವ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು, ಇದು ಅತ್ಯಂತ ನೋವಿನ ಸಂಗತಿ. ಮೃತರ ಆತ್ಮಕ್ಕೆ ಮತ್ತು ಸಂತ್ರಸ್ತ ಮಹಿಳೆಯ ಕುಟುಂಬಕ್ಕೆ ನಷ್ಟವನ್ನು ಭರಿಸುವ ಶಕ್ತಿಯನ್ನು ನೀಡಲಿ ಎಂದು ಪ್ರಾರ್ಥಿಸಿದರು.

ತರಬೇತಿ ಪಡೆದ ಆನೆಗಳು ಮತ್ತು ಇತರ ಕಾಡು ಪ್ರಾಣಿಗಳು ಸಹ ಅನಿರೀಕ್ಷಿತವಾಗಿ ವರ್ತಿಸಬಹುದು.



ಯಾವುದೇ ಕ್ಷಣದಲ್ಲಿ ಅವುಗಳ ಪ್ರತಿಕ್ರಿಯೆಗಳನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವುದು ಅಥವಾ ನಿರೀಕ್ಷಿಸುವುದು ಕಷ್ಟ. ಆದ್ದರಿಂದ ಆನೆಗಳ ಸೊಂಡಿಲುಗಳನ್ನು ಮುಟ್ಟುವುದು, ಛಾಯಾಚಿತ್ರಗಳಿಗಾಗಿ ಅವುಗಳ ಪಕ್ಕ ನಿಲ್ಲುವುದು, ಪ್ರವಾಸಿಗರಿಗೆ ಆನೆಗಳನ್ನು ಸ್ನಾನ ಮಾಡಲು ಅವಕಾಶ ನೀಡುವುದು ಅಥವಾ ಅವುಗಳಿಗೆ ಬೆಲ್ಲ, ಬಾಳೆಹಣ್ಣು ಮತ್ತು ಇತರ ಆಹಾರ ಪದಾರ್ಥಗಳನ್ನು ನೀಡುವಂತಹ ಚಟುವಟಿಕೆಗಳನ್ನು ನಿಷೇಧಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

# ಚ.ರಾ.ಪಟ್ಟಣದಲ್ಲಿ ಹದ ಮಳೆ: ರೈತರ ಸಂತಸ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನಾದ್ಯಂತ ಸೋಮವಾರ ಹದ ಮಳೆ ಸುರಿದಿದ್ದು ರೈತರಲ್ಲಿ ಮಂದಹಾಸ ಮೂಡಿಸಿದೆ.

ಬೆಳಿಗ್ಗೆಯಿಂದ ಮೋಡ ಕವಿದ ವಾತಾವರಣ ಸೃಷ್ಟಿಯಾಗಿ ಮಧ್ಯಾಹ್ನ 2 ಗಂಟೆಗೆ ಪ್ರಾರಂಭವಾದ ಮಳೆ ಸಂಜೆ 4ರವರೆಗೆ ಸುರಿಯಿತು. ಪೂರ್ವ ಮುಂಗಾರು ಮಳೆ ಕೊರತೆಯಿಂದ ಕೃಷಿ ಚಟುವಟಿಕೆಗಳಿಗೆ ಭಾರೀ ಹಿನ್ನಡೆಯಾಗಿತ್ತು. ಯುಗಾದಿ ಹೊಸ ಸಂವತ್ಸರದ ನಂತರ ಮಳೆ ಪ್ರಾರಂಭಗೊಂಡಿದ್ದರೆ ಮುಂಗಾರು ಹಂಗಾಮಿನ ಬೆಳೆ ಬಿತ್ತನೆ ಮಾಡಲು ಅನುಕೂಲವಾಗುತ್ತಿತ್ತು. ಆದರೆ 2 ತಿಂಗಳು ಸಮೀಪಿಸಿದರೂ ಪ್ರಾರಂಭವಾಗದ ಹಿನ್ನಲೆ ಯಾವುದೇ ಮುಂಗಾರು ಹಂಗಾಮಿನ ಬೆಳೆಗಳು ಬಿತ್ತನೆ ಕಂಡಿರುವುದಿಲ್ಲ.

ಈಗಷ್ಟೇ ಮಳೆ ಪ್ರಾರಂಭವಾಗಿದ್ದು



ಕೃಷಿ ಜಮೀನು ಉಳುಮೆ ಮಾಡಿ ಗೊಬ್ಬರ ಹರಡಿ ಹದಗೊಳಿಸಿಲ್ಲದ ಕಾರಣ ಮುಂಗಾರು ಹಂಗಾಮಿನ ಬೆಳೆಗಳನ್ನು ಬಿತ್ತನೆ ಮಾಡಲು ಹಿನ್ನಡೆಯಾಗಲಿದೆ. ಮಳೆ ಬಿಡುವು ನೀಡಿ ಕೃಷಿ ಜಮೀನುಗಳನ್ನು ಹದಗೊಳಿಸಿ ಬಿತ್ತನೆ ಮಾಡಿದರೂ ಸಹ ತಡವಾಗಿರುವುದರಿಂದ ನಿರೀಕ್ಷೆಯಂತೆ ಫಸಲು ಬರಲು ಸಾಧ್ಯವಿಲ್ಲ. ಸಮಯ ಮೀರಿ ಬಿತ್ತನೆ ಮಾಡಿದರೆ ಉತ್ತಮ ಫಸಲು ಹಾಗು ಇಳುವರಿ ಸಿಗುವುದಿಲ್ಲವೆಂದು ಮಂಚೇನಹಳ್ಳಿ ರೈತ ನಂಜೇಗೌಡ ಅವರು ತಿಳಿಸಿದರು.

ಮೊದಲೆಲ್ಲಾ ಬೋರೆ ಪ್ರದೇಶಗಳಲ್ಲಿ ಮುಂಗಾರು ಹಂಗಾಮಿನ ಬೆಳೆ ಬೆಳೆಯಲಾಗುತ್ತಿತ್ತು. ಆದರೆ, ಇತ್ತೀಚಿನ ವರ್ಷಗಳಿಂದ ಕೊಳವೆ

» ಮೂರನೇ ಪುಟದಲ್ಲಿ

# ಮಾಜಿ ಪ್ರಧಾನಿ ದೇವೇಗೌಡರ 94ನೇ ಜನ್ಮ ದಿನಾಚರಣೆ

## ಹಾಸನದಲ್ಲಿ 30 ಅಡಿ ಎತ್ತರದ ಕಟೌಟ್‌ಗೆ ಕ್ಷೀರಾಭಿಷೇಕ | ದೇವಾಲಯಗಳಲ್ಲಿ ವಿಶೇಷ ಪೂಜೆ

• ಪ್ರಜೋದಯ ವರದಿ

**ಹಾಸನ:** ನಗರ ಸೇರಿ ಜಿಲ್ಲಾದ್ಯಂತ ಸೋಮವಾರ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ 94ನೇ ಹುಟ್ಟು ಹಬ್ಬವನ್ನು ಜೆಡಿಎಸ್ ಕಾರ್ಯಕರ್ತರು, ಚುನಾಯಿತ ಜನಪ್ರತಿನಿಧಿಗಳು ಹಾಗು ಅಭಿಮಾನಿಗಳು ಅರ್ಥಪೂರ್ಣವಾಗಿ ಆಚರಿಸಿದರು.

ದೇವಸ್ಥಾನಗಳಲ್ಲಿ ಪೂಜೆ, ಆಸ್ಪತ್ರೆ ರೋಗಿಗಳಿಗೆ ಹಣ್ಣು-ಹಂಪಲು ವಿತರಣೆ ಸೇರಿ ವಿವಿಧ ಕಾರ್ಯಕ್ರಮಗಳು ಜರುಗಿದವು. ಹಾಸನದಲ್ಲಿ ಶಾಸಕ ಹೆಚ್.ಪಿ.ಸ್ವರೂಪ್ ನೇತೃತ್ವದಲ್ಲಿ ಅದ್ದೂರಿ ಆಚರಣೆ ಹಮ್ಮಿಕೊಳ್ಳಲಾಗಿತ್ತು.

ನಗರದ ನೀರುಬಾಗಿಲು ಆಂಜನೇಯ ಸ್ವಾಮಿ ದೇವಾಲಯದಲ್ಲಿ



ದೇವೇಗೌಡರ ಹೆಸರಿನಲ್ಲಿ ಅರ್ಚನೆ ಹಾಗು ವಿಶೇಷ ಪೂಜೆ ಮಾಡಿಸಲಾಯಿತು. ಈ ವೇಳೆ ನೂರಾರು ಈಡುಗಾಯಿ ಒಡೆದು ದೇವೇಗೌಡರ ಪರ ಜಯಘೋಷ ಮೊಳಗಿಸಿ, ಸಿಹಿ ಹಂಚಿ ಸಂಭ್ರಮಿಸಲಾಯಿತು.

ನಂತರ ಆಜಾದ್ ರಸ್ತೆಯಲ್ಲಿರುವ ಹಜರತ್ ಗುಜರಾತಿ ಬಾದ್ ಷಾ ದರ್ಗಾದಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ನಗರದ ಎನ್.ಆರ್. ವೃತ್ತದಲ್ಲಿ ದೇವೇಗೌಡ ಅವರ 30 ಅಡಿ ಎತ್ತರದ ಕಟೌಟ್‌ಗೆ ಶಾಸಕ ಹೆಚ್.ಪಿ.ಸ್ವರೂಪ್, ಮಾಜಿ ಸಚಿವ ಹೆಚ್.ಕೆ. ಕುಮಾರಸ್ವಾಮಿ, ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಸ್. ಲಿಂಗೇಶ್ ಸೇರಿ ಪಕ್ಷದ ಮುಖಂಡರು,

» ಮೂರನೇ ಪುಟದಲ್ಲಿ

# ಕಾನೂನು ಬಾಹಿರ ಕೃತ್ಯ ಕಡಿವಾಣಕ್ಕೆ ಸಹಕರಿಸಿ

## ಬಾಲ್ಯ ವಿವಾಹ, ಪೋಕ್ಸೋ ತಡೆಗೆ ಡಿಸಿ ಸೂಚನೆ | ಸಹಾಯವಾಣಿ ಬಲಪಡಿಸಲು ನಿರ್ದೇಶನ

• ಪ್ರಜೋದಯ ವರದಿ

**ಹಾಸನ:** ಸುರಕ್ಷಿತ ಸಮಾಜ ನಮ್ಮದಾಗಬೇಕೆಂದರೆ ಬಾಲ್ಯ ವಿವಾಹ, ಪೋಕ್ಸೋದಂತಹ ಕಾನೂನು ಬಾಹಿರ ಚಟುವಟಿಕೆಗಳಿಗೆ ಸಂಪೂರ್ಣ ಕಡಿವಾಣ ಹಾಕಬೇಕು. ಆ ನಿಟ್ಟಿನಲ್ಲಿ ಸಾರ್ವಜನಿಕರು ಜವಾಬ್ದಾರಿ ನಿಬಾಯಿಸಬೇಕೆಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಹೇಳಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಸಂಕಷ್ಟಕ್ಕೆ ಸಿಲುಕಿದ ಹೆಣ್ಣು ಮಕ್ಕಳು 181 ಸಹಾಯವಾಣಿಗೆ ಕರೆ ಮಾಡಿದರೆ ಸಹಾಯ ದೊರಕಬೇಕು. ಈ ನಿಟ್ಟಿನಲ್ಲಿ ಸಹಾಯವಾಣಿ ಕೇಂದ್ರಗ



**50 ಸಾವಿರ ರೂ. ದಂಡ ವಿಧಿಸಲು ಸೂಚನೆ**

ವಿದ್ಯಾ ಸಂಸ್ಥೆಗಳಲ್ಲಿ ಮೂರು ವರ್ಷಗಳಿಂದ ಮಹಿಳಾ ದೌರ್ಜನ್ಯ ತಡೆಗೆ ಆಂತರಿಕ ದೂರು ನಿವಾರಣಾ ಸಮಿತಿ ರಚಿಸದೆ ಇರುವವರಿಗೆ 50 ಸಾವಿರ ರೂ. ದಂಡ ವಿಧಿಸುವಂತೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಸೂಚನೆ ನೀಡಿದರು.

ಲಿಂಗತ್ವ ಅಲ್ಪಸಂಖ್ಯಾತರಿಗೆ ಇರುವ ಕೌಶಲ ಆಧಾರಿಸಿ ಕೆಲಸ ಮಾಡಲು ಉದ್ಯೋಗಿನಿ ಯೋಜನೆಯಡಿ ಬ್ಯಾಂಕ್ ಮೂಲಕ ಸಾಲ ಸೌಲಭ್ಯ ಒದಗಿಸಬೇಕು. ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ ನಿವೇಶನ ಗುರುತಿಸಬೇಕು. ನಗರ ಪ್ರದೇಶಗಳಲ್ಲಿ ನಿವೇಶನ ಗುರುತಿಸಿ ನೀಡಲು ಯೋಜನಾ ನಿರ್ದೇಶಕರಿಗೆ ನಿರ್ದೇಶನ ನೀಡಿದರು.

ಳಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿ ಜಾಗರೂಕರಾಗಿರಬೇಕು. ಸಂತ್ರಸ್ತರು ಕರೆ ಮಾಡಿದಾಗ ಹೇಗೆ ಸ್ಪಂದಿಸುವ ಕುರಿತು ತರಬೇತಿ ನೀಡಬೇಕೆಂದು ತಿಳಿಸಿದರು.

ಶಕ್ತಿ ಸದನಕ್ಕೆ ದಾಖಲಾದ ಮಹಿಳೆಯರ ಆರೋಗ್ಯ ತಪಾಸಣೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು. ಮಾನವ ಹಕ್ಕು ಮತ್ತು ಮಹಿಳೆಯರ ಹಕ್ಕುಗಳು ಉಲ್ಲಂಘನೆ ಆಗದಂತೆ ನಿಗಾ ವಹಿಸಿ ಅಸುರಕ್ಷಿತ ಹೆಣ್ಣು ಮಕ್ಕಳ ರಕ್ಷಣೆಗೆ ಒತ್ತು ನೀಡಬೇಕು. ನಿರಾಶ್ರಿತರು ರಸ್ತೆ ಬದಿ, ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ ಸೇತುವೆ, ಪಾರ್ಕ್‌ಗಳಲ್ಲಿ ಮಲಗಬಾರದು. ಬೀದಿಯಲ್ಲಿ ಮಾನಸಿಕ ಅಸ್ವಸ್ಥ ಹೆಣ್ಣು ಮಕ್ಕಳು ಓಡಾಡುತ್ತಿ

» ಮೂರನೇ ಪುಟದಲ್ಲಿ

## ಮೇ 21ಕ್ಕೆ ಪ್ಲಾಂಟರ್ಸ್ ಸಂಘದ ವಾರ್ಷಿಕ ಮಹಾಸಭೆ

• ಪ್ರಜೋದಯ ವರದಿ

**ಸಕಲೇಶಪುರ :** ಮೇ 21 ರಂದು ಬೆಳೆಗಾರರ ಸಮ್ಮೇಳನ, ಕಾಫಿ ಕೃಷಿ ಮೇಳ ಹಾಗು 30ನೇ ವಾರ್ಷಿಕ ಮಹಾಸಭೆ ಆಯೋಜಿಸಲಾಗಿದೆ .

ಅಂದು ಗುರುವಾರ ಬೆಳಿಗ್ಗೆ 10.30ಕ್ಕೆ ಪಟ್ಟಣದ ಶ್ರೀ ಗುರುವೇಗೌಡ ಕಲ್ಯಾಣ ಮಂಟಪದಲ್ಲಿ ಕಾರ್ಯಕ್ರಮ ಆಯೋಜಿಸಿದ್ದು, ಸಂಸದ ಶ್ರೇಯಸ್ ಪಟೇಲ್ ಉದ್ಘಾಟಿಸಲಿದ್ದಾರೆ. ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ|| ಬಿ.ದಿನೇಶ್, ಶಾಸಕ ಸಿಮೆಂಟ್ ಮಂಜು, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಮತ್ತಿತರರು ಭಾಗವಹಿಸಲಿದ್ದಾರೆ. ಕೃಷಿ ವಸ್ತುಪ್ರದರ್ಶನ ಏರ್ಪಡಿಸಲಾಗಿದ್ದು, ವಿವಿಧ ಕೃಷಿ ಹಾಗು ತೋಟಗಾರಿಕೆ ಸಂಬಂಧಿತ ಕಂಪನಿಗಳು ಭಾಗವಹಿಸಲಿವೆ. ಸುಮಾರು 1500ಕ್ಕೂ ಹೆಚ್ಚು ಬೆಳೆಗಾರರು

# ಹಸಿರು ಹಾಸನ ಸಂಕಲ್ಪ ಈಡೇರಲು ಸಸಿಗಳೇ ಇಲ್ಲ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಜಿಲ್ಲಾದ್ಯಂತ 5 ಲಕ್ಷ ಸಸಿಗಳ ನೆಟ್ಟು ಹಸಿರು ಹಾಸನದ ಸಂಕಲ್ಪ ಹಾಕಿಕೊಂಡಿದ್ದಾರೆಯಾದರೂ ವಾಸ್ತವವಾಗಿ ಅಷ್ಟು ಸಸಿಗಳು ಅರಣ್ಯ ಇಲಾಖೆಯಲ್ಲಿ ಇಲ್ಲವೆಂದು ಹಸಿರುಭೂಮಿ ಪ್ರತಿಷ್ಠಾನದ ಮುಖಂಡ ಆರ್.ಪಿ.ವೆಂಕಟೇಶ್‌ಮೂರ್ತಿ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಹಸಿರೀಕರಣಕ್ಕಾಗಿ ಜಿಲ್ಲಾಡಳಿತ ಕೇಳುತ್ತಿರುವ ಸಸಿಗಳು ಲಭ್ಯವಿಲ್ಲವೆಂದು ಅರಣ್ಯ ಇಲಾಖೆ ಅಧಿಕಾರಿಗಳು ಪತ್ರ ಬರೆದಿದ್ದಾರೆ. ಇಂತಹ ದುಸ್ಥಿತಿಗೆ ಕಾರಣ ಕೇಳಿದರೆ ಸಸಿಗಳನ್ನು ಬೆಳೆಸಲು ಅನುದಾನ ಇಲ್ಲವೆಂಬ ಉತ್ತರ ಬಂದಿದೆ. ಅರಣ್ಯ ಬೆಳೆಸಲು ಹಣಕಾಸು ನೀಡದ ಸರ್ಕಾರ, ಸಚಿವರು ಏಕೆ ಬೇಕು, ಸರ್ಕಾರಕ್ಕೆ ಇಂತಹ ದುಸ್ಥಿತಿ ಬಂದಿ




ದೆಯೇ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇಷ್ಟಾದರೂ ಅರಣ್ಯ ಸಚಿವರು ಈ ಬಗ್ಗೆ ಗಮನ ಹರಿಸದೇ ಇರುವುದು ಬೇಸರ ತರಿಸಿದೆ. ಪ್ರಸಕ್ತ ವರ್ಷ ಹಸಿರೀಕರಣಕ್ಕೆ ಅಗತ್ಯವಾದ ಸಸಿಗಳನ್ನು ಬೇರೆ ರಾಜ್ಯದಿಂದಲಾದರೂ ತರಿಸಲು ತಕ್ಷಣ ಕ್ರಮ ಕೈಗೊಳ್ಳಬೇಕು. ಮುಂದಿನ ವರ್ಷ ಪ್ರಮಾದ ಮರುಕಳಿಸದಂತೆ ಎಚ್ಚರ ವಹಿಸಬೇಕೆಂದರು.

ತೀವ್ರ ತಾಪಮಾನ ಹೆಚ್ಚುತ್ತಿರುವ ಪ್ರಪಂಚದ ನೂರು ನಗರಗಳಲ್ಲಿ 90 ನಗರಗಳು ಭಾರತದಲ್ಲಿವೆ ಎಂದು ಪರಿಸರ ತಜ್ಞರು ಎಚ್ಚರಿಸಿದ್ದಾರೆ. ಆದರೂ ಅರಣ್ಯ ವೃದ್ಧಿಗೆ ಕ್ರಮ ವಹಿಸದಿರುವುದು ನೋವು ತರಿಸಿದೆ. ಜಿಲ್ಲಾಡಳಿತ ಆರಂಭಿಸಿರುವ ಹಸಿರೀಕರಣ ಆಂದೋಲನದಲ್ಲಿ ಪ್ರತಿಯೊಬ್ಬರೂ ಒಂದೊಂದು ಗಿಡ ನೆಡುವ ಮೂಲಕ ಕೈಜೋಡಿಸಬೇಕೆಂದು ಮನವಿ ಮಾಡಿದರು.

ಗ್ಯಾರಂಟಿ ಯೋಜನೆಗಾಗಿ ಮೂರು ವರ್ಷದಲ್ಲಿ 1.20 ಲಕ್ಷ ಕೋಟಿ ರೂ. ವ್ಯಯಿಸಿರುವ ಸರ್ಕಾರ ಸ್ವಲ್ಪ ಹಣವನ್ನಾದರೂ ಅರಣ್ಯ

» ಮೂರನೇ ಪುಟದಲ್ಲಿ

# ಚಿನ್ನ ಖರೀದಿ ಮುಂದೂಡಿಕೆಗೆ ಕರೆ: ಅಕ್ಕಸಾಲಿಗರಿಗೆ ಸಂಕಷ್ಟ

-ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ

**ಹಾಸನ:** ದೇಶದ ಆರ್ಥಿಕ ಪರಿಸ್ಥಿತಿ ಹಿತದೃಷ್ಟಿಯಿಂದ ಪ್ರಧಾನಿ ನರೇಂದ್ರ ಮೋದಿ ಅವರು ಚಿನ್ನ ಖರೀದಿಯನ್ನು ಕಡಿಮೆ ಮಾಡಿ ಅಥವಾ ಮುಂದೂಡಿ ಎಂದು ಕರೆ ನೀಡಿದ ನೇರ ಪರಿಣಾಮ ಸಣ್ಣ ಮಟ್ಟದ ಅಕ್ಕಸಾಲಿಗರ ಬದುಕಿನ ಮೇಲೆ ಬೀರಿದೆ.

ಜಿಲ್ಲಾ ಹಾಗು ತಾಲ್ಲೂಕು ಕೇಂದ್ರಗಳಲ್ಲಿ ಸ್ಥಳೀಯವಾಗಿ ಆಭರಣ ತಯಾರಿಸುತ್ತಿದ್ದ ಕರಕುಶಲ ಕಾರ್ಮಿಕರು ಈಗ ಕೆಲಸ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದ್ದಾರೆ. ದಿನನಿತ್ಯದ ಬೇಡಿಕೆಯನ್ನು ಆಧರಿಸಿ ಕಾರ್ಯನಿರ್ವಹಿಸುತ್ತಿದ್ದ ಸಣ್ಣ ಪ್ರಮಾಣದ ಚಿನ್ನಾಭರಣ ತಯಾರಿಕಾ ಕೇಂದ್ರಗಳು ಮುಂದಿನ ದಿನಗಳಲ್ಲಿ ಬಾಗಿಲು ಮುಚ್ಚುವ ಪರಿಸ್ಥಿತಿಗೆ ತಲುಪಿದರೂ ಆಶ್ಚರ್ಯಪಡುವಂತಿಲ್ಲ ಎನ್ನುವಂತಾಗಿದೆ.

ಇಂಧನ ಉಳಿಸಿ ಎಂದು ಪ್ರಧಾನಿ ನೀಡಿದ್ದ ಕರೆಯನ್ನು ಗಂಭೀರವಾಗಿ ಪರಿಗಣಿಸಿರುವ ಹಲವು ರಾಜ್ಯಗಳು ಅರ್ಧಷ್ಟು ಬೆಂಗಾವಲು ವಾಹನಗಳನ್ನು ಕಡಿಮೆ ಮಾಡಿವೆ. ವರ್ಕ್ ಫ್ರಂಹೋಂಗೂ ಅವಕಾಶ ನೀಡಿವೆ. ಅಲ್ಲದೇ ಸಚಿವರು, ಅಧಿಕಾರಿಗಳು, ರಾಜಕಾರಣಿಗಳು

▪ ಬೆಲೆ ಏರಿಕೆಯಿಂದಲೂ ದೊಡ್ಡ ಹೊಡೆತ

▪ ಕೆಲಸ ಇಲ್ಲದಂತಾಗಿದೆ ಕರಕುಶಲರಿಗೆ



ಮೆಟ್ರೋ, ಸೈಕಲ್, ಎಲೆಕ್ಟ್ರಿಕ್ ವಾಹನಗಳಲ್ಲಿ ಸಂಚರಿಸಲು ಶುರು ಮಾಡಿದ್ದಾರೆ. ಇದೇ ಪರಿಣಾಮ ಚಿನ್ನದ ಖರೀದಿ ಮೇಲೂ ದೊಡ್ಡ ಮಟ್ಟದಲ್ಲಿ ಪರಿಣಾಮ ಬೀರಿದೆ. ಜೊತೆಗೆ ಬೆಲೆ ಏರಿಕೆಯಿಂದಲೂ ಜನರು ಆಭರಣ ಖರೀದಿಯಿಂದ ಹಿಮ್ಮುಖವಾಗುತ್ತಿದ್ದಾರೆ.

ಮದುವೆ, ಸಂಪ್ರದಾಯ ಮತ್ತು ಗೌರವದ ಪ್ರತೀಕವಾಗಿರುವ ಚಿನ್ನ ಸಾವಿರಾರು ಕುಟುಂಬಗಳ ಬದುಕಿಗೂ ಆಧಾರವಾಗಿದೆ. ಆದರೆ, ಮಾರುಕಟ್ಟೆಯ ಅನಿಶ್ಚಿತತೆ, ಬೆಲೆ ಏರಿಕೆ ಮತ್ತು ಖರೀದಿ ಕುಸಿತದಿಂದ ಅಕ್ಕಸಾಲಿಗರ ಬದುಕು ಮಂಕಾಗಿದೆ. ರಾತ್ರಿ-ಹಗಲು ಎನ್ನದೆ ಕೆಲಸ ಮಾಡುತ್ತಿದ್ದ ಕರಕುಶಲ ಕೈಗಳು ಈಗ ಕೆಲಸಕ್ಕಾಗಿ ಕಾಯುವಂತಾಗಿವೆ.

ಸಾಮಾನ್ಯವಾಗಿ ಮದುವೆ, ಶುಭಕಾರ್ಯ, ಅಕ್ಷಯ ತೃತೀಯ, ಹಬ್ಬದ ಸಂದರ್ಭಗಳಲ್ಲಿ ಚಿನ್ನಾಭರಣಗಳ ಬೇಡಿಕೆ ಹೆಚ್ಚಿರುತ್ತದೆ. ಆದರೆ, ಇತ್ತೀಚಿನ ದಿನಗಳಲ್ಲಿ ಚಿನ್ನದ ಬೆಲೆ ಗಗನಕ್ಕೇರಿರುವುದರ ಜೊತೆಗೆ ಖರೀದಿ ಕಡಿಮೆ ಮಾಡುವಂತೆ ಬಂದ ಕರೆ ಮಾರುಕಟ್ಟೆಯಲ್ಲಿ ಆತಂಕ ಸೃಷ್ಟಿಸಿದೆ. ಈಗಾಗಲೇ 10 ಗ್ರಾಂ ಚಿನ್ನದ ಬೆಲೆ ದಾಖಲೆ ಮಟ್ಟ ತಲುಪಿರುವುದರಿಂದ ಮಧ್ಯಮ ಹಾಗು ಬಡ ಕುಟುಂಬಗಳು ಚಿನ್ನ ಖರೀದಿಯಿಂದ ಹಿಂದೆ ಸರಿಯುತ್ತಿವೆ. ಸಾಮಾಜಿಕ ಜಾಲತಾಣಗಳಲ್ಲೂ ಚಿನ್ನದ ಬೆಲೆ ಏರಿಕೆ ಮತ್ತು ಖರೀದಿ ಕುಸಿತದ ಕುರಿತು ವ್ಯಾಪಕ ಚರ್ಚೆಗಳು ನಡೆಯುತ್ತಿವೆ.

ಈ ಹಿನ್ನಲೆ ಜಿಲ್ಲೆಯ ಹಲವಾರು ಸ್ಥಳೀಯ ಜ್ಯೂವೆಲರಿ ಅಂಗಡಿಗಳು ಹೊಸ ಆರ್ಡರ್‌ಗಳನ್ನು ಕಡಿಮೆ ಮಾಡಿದ್ದು, ಕೆಲವರು ತಾತ್ಕಾಲಿಕವಾಗಿ ಆಭರಣ ತಯಾರಿಕೆಯನ್ನು ನಿಲ್ಲಿಸಿದ್ದಾರೆ. ಇದರಿಂದ ಕಾರ್ಮಿಕರಿಗೆ ನೀಡುತ್ತಿದ್ದ ಕೆಲಸ ಸಂಪೂರ್ಣ ಕುಂಠಿತಗೊಂಡಿದೆ.

**ಮತ್ತೆ ಎದುರಾದ ಕೊರೊನಾ ಕಾಲದ ಸ್ಥಿತಿ**

ನಗರದ ವಿವಿಧ ಬಡಾವಣೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಣ್ಣ ಚಿನ್ನಾಭರಣ ತಯಾರಿಕಾ ಘಟಕಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಈಗ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ದಿನಗೂಲಿ ಆಧಾರದಲ್ಲಿ ಬದುಕುತ್ತಿದ್ದ ಅನೇಕ

» ನಾಲ್ಕನೇ ಪುಟದಲ್ಲಿ

**ಸರ್ಕಾರದ ನೆರವಿಗೆ ಆಗ್ರಹ**

ಕೆಲಸ ಕಳೆದುಕೊಂಡಿರುವ ಅಕ್ಕಸಾಲಿಗರು ಹಾಗು ಚಿನ್ನಾಭರಣ ತಯಾರಿಕಾ ಕಾರ್ಮಿಕರು ಸರ್ಕಾರದಿಂದ ವಿಶೇಷ ಪರಿಹಾರ ಪ್ಯಾಕೇಜ್ ಘೋಷಿಸುವಂತೆ ಆಗ್ರಹಿಸಿದ್ದಾರೆ. ಕಾರ್ಮಿಕರಿಗೆ ತಾತ್ಕಾಲಿಕ ಆರ್ಥಿಕ ನೆರವು ಸಬ್ಸಿಡಿ ಆಧಾರಿತ ಸಾಲ ಸೌಲಭ್ಯ ಸಣ್ಣ ತಯಾರಿಕಾ ಘಟಕಗಳಿಗೆ ಪ್ರೋತ್ಸಾಹಧನ ಕರಕುಶಲ ಕಾರ್ಮಿಕರಿಗೆ ವಿಶೇಷ ಕಲ್ಯಾಣ ಯೋಜನೆ ಇವುಗಳನ್ನು ಜಾರಿಗೆ ತರಬೇಕೆಂದು ಅವರು ಒತ್ತಾಯಿಸಿದ್ದಾರೆ.

> **ಜಿಲ್ಲೆಯಲ್ಲಿ 700 ರಿಂದ 800 ಜನರು ಕೆಲಸ ಪ್ರತಿನಿತ್ಯ ಚಿನ್ನಾಭರಣಾ ತಯಾರಿಕಾ ಕೆಲಸ ವನ್ನೇ ನಂಬಿಕೊಂಡು ಜೀವನ ಮಾಡುತ್ತಿ ದ್ದೇವೆ. ಈ ನಡುವೆ ಚಿನ್ನಾ ಭರಣ ಖರೀದಿ ಕಡಿಮೆಯಾದರೆ ನಮಗೆ ಕೆಲಸ ಇಲ್ಲದಂತಾಗುತ್ತದೆ. ದೊಡ್ಡ ಆಭರಣದ ಮಳಿಗೆಗಳು ಫ್ಯಾಕ್ಟರಿಗಳನ್ನು ಇಟ್ಟುಕೊಂಡಿರುವುದರಿಂದ ಅವರಿಗೇನು ಸಮಸ್ಯೆ ಆಗುವುದಿಲ್ಲ. ಕುಲ ಕಸಬು ನಂಬಿಕೊಂಡಿರುವ ನಮ್ಮ ಜೀವನ ಕಷ್ಟವಾಗುತ್ತದೆ.**
>
> **-ಸುರೇಶ್, ಅಕ್ಕಸಾಲಿಗ**

# ಪುರಸಭೆ ಅಧಿಕಾರಿಗೆ ಚಪ್ಪಲಿ ತೋರಿಸಿದ ಯುವಕ



• ಪ್ರಜೋದಯ ವರದಿ

**ಸಕಲೇಶಪುರ:** ಪಟ್ಟಣದ ಸುಭಾಷ್ ಮೈದಾನ ಸಮೀಪದ ವಿವಾದಿತ ಜಾಗದಲ್ಲಿ ಕಸ ಸುರಿದ ವಿಚಾರಕ್ಕೆ ಸಂಬಂಧಿಸಿ ಸೋಮವಾರ ಪುರಸಭೆಯಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು.

ಜಾಗ ತಮ್ಮದೆಂದು ವಕೀಲ ಅಭಿಜ್ಞಾನ್ ನ್ಯಾಯಾಲಯದ ಮೆಟ್ಟಿಲೇರಿ ದ್ದಾರೆ. ಪ್ರದೇಶದಲ್ಲಿ ನಾಲ್ಕರಿಂದ ಐದು ಸರ್ವೆ ನಂಬರ್‌ಗಳು ಇರುವುದರಿಂದ ಕಾನೂನು ಸಲಹೆ ಪಡೆದು ಮುಂದಿನ ಕ್ರಮ ಕೈಗೊಳ್ಳಲು ಕಾಲಾವಕಾಶ ನೀಡುವಂತೆ ಪುರಸಭೆ ಅಧಿಕಾರಿಗಳು ತಿಳಿಸಿದ್ದರು ಎನ್ನಲಾಗಿದೆ.

ಈ ವಿಚಾರವಾಗಿ ಅಭಿಜ್ಞಾನ್ ಪರವಾಗಿ ಪುರಸಭೆ ಕಚೇರಿಗೆ ಬಂದಿದ್ದ ಪ್ರೀತಂ ಎಂಬಾತ ಅಧಿಕಾರಿ ನಟರಾಜ್ ಅವರೊಂದಿಗೆ ವಾಗ್ವಾದ ನಡೆಸಿದ್ದಾನೆ. ಮಾತಿನ ಚಕಮಕಿ ತೀವ್ರಗೊಂಡು ಪ್ರೀತಂ, ನಟರಾಜ್ ಅವರಿಗೆ ಚಪ್ಪಲಿ ತೋರಿಸಿ ಆವಾಜ್ ಹಾಕಿದ್ದಾನೆ. ಈ ದೃಶ್ಯ ಪುರಸಭೆಯ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ.

ಈ ಹಿಂದೆ ಕೂಡ ಪುರಸಭೆ ಮುಖ್ಯಾಧಿಕಾರಿ ಮಹೇಶ್ವರಪ್ಪ ಅವರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದಡಿ ಪ್ರೀತಂ ವಿರುದ್ಧ ಪ್ರಕರಣ ದಾಖಲಾಗಿತ್ತು. ತಮಗೆ ನೇರ ಸಂಬಂಧ ಇಲ್ಲದ ವಿಚಾರದಲ್ಲಿ ಮಧ್ಯಪ್ರವೇಶಿಸುತ್ತಾರೆಂದು ಪ್ರೀತಂ ವಿರುದ್ಧ ಅಧಿಕಾರಿಗಳು ಬೇಸರ ವ್ಯಕ್ತಪಡಿಸಿದ್ದಾರೆ.

# ವಿದ್ಯೆಗೆ ವಿನಯವೇ ಭೂಷಣ, ಅಕ್ಷರಗಳಲ್ಲ...

ಅನಕ್ಷರಸ್ಥರ ಬುದ್ಧಿವಂತಿಕೆ ಪ್ರಶ್ನಿಸುವವರು ಅಕ್ಷರಸ್ಥರ ಮಾನವೀಯತೆಯನ್ನು ಪ್ರಶ್ನಿಸಬೇಕಲ್ಲವೇ? ಒಂದು ಟ್ವೀಟ್. ಅಕ್ಷರ ಕಲಿಕೆ ಒಂದು ನೈಪುಣ್ಯ ಅಥವಾ ಸುಲಭವಾಗಿ ಮಾಹಿತಿ ತಿಳಿಯುವ ಒಂದು ವಿಧಾನ ಅಥವಾ ಜೀವನ ಕೌಶಲ್ಯದ ಸಾಧನವೇ ಹೊರತು ಅದೇ ಜ್ಞಾನವಲ್ಲ, ಅರಿವಲ್ಲ, ಮೌಲ್ಯವಲ್ಲ, ಬದುಕಲ್ಲ. ಅಕ್ಷರ ಕಲಿಕೆ ಎಂಬುದು ಅಡುಗೆ ಮಾಡುವ, ಹೊಲಿಗೆ ಮಾಡುವ, ವಾಹನ ಚಾಲನೆ ಮಾಡುವ, ಮನೆ ಕಟ್ಟುವ, ಭೇಟೆಯಾಡುವ ರೀತಿಯ ಒಂದು ಕೌಶಲವೇ ಹೊರತು ಅದು ಎಲ್ಲವನ್ನೂ ಒಳಗೊಂಡ ವಿಶೇಷ ಅತಿಮಾನುಷ ಶಕ್ತಿಯೇನು ಅಲ್ಲ.

ಅಕ್ಷರ ಕಲಿಯದೆಯೂ ವ್ಯಕ್ತಿತ್ವವಿದೆ, ಜ್ಞಾನವಿದೆ, ನಾಗರೀಕತೆಯಿದೆ ಬದುಕಿದೆ, ಹಾಗೆಯೇ ಅಕ್ಷರ ಕಲಿತೂ ಅಜ್ಞಾನವಿದೆ, ಮೋಸವಿದೆ, ಅಮಾನವೀಯತೆಯಿದೆ, ಅನಾಗರಿಕತೆ ಇದೆ. ಅಕ್ಷರಸ್ಥರ ಈಗಿನ ಮೋಸ ವಂಚನೆ ದುಷ್ಟತನ ಭ್ರಷ್ಟಾಚಾರ ಜಾತಿವಾದ ಶೋಷಣೆ ಅಪನಂಬಿಕೆ ಎಲ್ಲವನ್ನೂ ಗಮನಿಸಿದಾಗ ಅನಕ್ಷರಸ್ಥರ ಕೈ ಬಾಯಿ ಮೆದುಳು ಮನಸ್ಸು ಹೃದಯ ನಾಲಿಗೆ ನಂಬಿಕೆ ವ್ಯವಹಾರ ಆ ಮುಗ್ಧತೆ ಮತ್ತು ಆ ಶುದ್ಧತೆಯ ಮಹತ್ವ ನಮಗೆ ಅರಿವಾಗುತ್ತದೆ. ನ್ಯಾಯಾಂಗ ಕಾರ್ಯಾಂಗ ಶಾಸಕಾಂಗ ಪತ್ರಿಕಾರಂಗ ಧರ್ಮಾಂಗ ಶಿಕ್ಷಕರು ಪೋಲೀಸರು ವಕೀಲರು ಎಲ್ಲವನ್ನೂ ಬಹುತೇಕ ಅಕ್ಷರಸ್ಥರೇ ನಿರ್ವಹಿಸುವಾಗಲೂ ಇಡೀ ವ್ಯವಸ್ಥೆ ಸರಿಪಡಿಸಲಾಗದಷ್ಟು ಹದಗೆಟ್ಟಿದೆ. ಎಲ್ಲಾ ಸ್ವಾತಂತ್ರ್ಯ ಇರುವಾಗಲು ಮನಸ್ಸುಗಳು ಗುಲಾಮಿತನದತ್ತ ಅಥವಾ ಜೀತ ಪದ್ಧತಿಯತ್ತ ಸಾಗುತ್ತಿವೆ. ಕೊಲೆಗಡುಕರು, ಅತ್ಯಾಚಾರಿಗಳು, ಭ್ರಷ್ಟರು, ಧರ್ಮಾಂಧರು, ಜಾತಿವಾದಿಗಳು, ವಂಶಾಡಳಿತದ ಒಂದೇ ಕುಟುಂಬದವರು, ಜೈಲಿನ ಕಂಬಿ ಎಣಿಸಿದವರು, ಗಡೀಪಾರಾದವರು ಹೀಗೆ ನೀಚಾತಿನೀಚರನ್ನು ಗುಪ್ತ ಮತದಾನದ ಮೂಲಕ ನಮ್ಮ ಜನಪ್ರತಿನಿಧಿಗಳಾಗಿ ಆಯ್ಕೆ ಮಾಡುವವರು ಸಹ ಬಹುತೇಕ ಅಕ್ಷರಸ್ಥರೇ ಎಂಬುದನ್ನು ಹೇಗೆ ಮರೆಯುವುದು.

ಅನಕ್ಷರಸ್ಥರ ಕ್ರೌರ್ಯ ಮತ್ತು ತಪ್ಪುಗಳು ಅವರ ಅಜ್ಞಾನದಿಂದ, ತಪ್ಪು ತಿಳಿವಳಿಕೆಯಿಂದ, ಸಂಪರ್ಕದ ಕೊರತೆಯಿಂದ, ಸಹಜ ಸಂಪ್ರದಾಯಗಳ ಒತ್ತಡದಿಂದ ಘಟಿಸಿದರೆ ಅಕ್ಷರಸ್ಥರ ಕ್ರಿಮಿನಲ್ ಚಟುವಟಿಕೆಗಳು ಉದ್ದೇಶಪೂರ್ವಕವಾಗಿ, ಅತಿ ಸ್ವಾರ್ಥದಿಂದ ಅರಿವಿನ ಅಂಚಿನಲ್ಲಿಯೇ ಸಂಭವಿಸುತ್ತವೆ. ಪೋಲೀಸ್ ಸ್ಟೇಷನ್ ಅಥವಾ ನ್ಯಾಯಾಲಯದಲ್ಲಿ ದಾಖಲಾಗಿರುವ ಶೇಕಡಾ 90% ರಷ್ಟು ಮೊಕದ್ದಮೆಗಳಲ್ಲಿ ವಾದಿ ಅಥವಾ ಪ್ರತಿವಾದಿಗಳು ಅಕ್ಷರಸ್ಥ ವಂಚಕರೇ ಆಗಿರುತ್ತಾರೆ. ದುರುದ್ದೇಶವೇ ಅದರ ಮೂಲ ಕಾರಣವಾಗಿರುತ್ತದೆ.



ಹೆಬ್ಬೆಟ್ಟು ಅಥವಾ ಅನಕ್ಷರಸ್ಥ ಎಂದು ಮೂದಲಿಸಿದರೆ ಅಕ್ಷರ ಸಂಶೋಧನೆಯ ಹಿಂದಿನ, ಅಕ್ಷರ ಕಲಿಯದ ಇಂದಿನ ಇಡೀ ಜನಾಂಗ ಅಥವಾ ಸಮುದಾಯಗಳನ್ನೇ ಅಗೌರವಿಸಿದಂತೆ ಆಗುತ್ತದೆ. ಅನಕ್ಷರಸ್ಥರಿಗೆ ಮಾಹಿತಿಯ ಕೊರತೆ ಇರಬಹುದು ಅಥವಾ ತಂತ್ರಜ್ಞಾನದ ಕೊರತೆ ಇರಬಹುದು. ಆದರೆ ಮಾನವೀಯತೆಯ ಕೊರತೆ ಇರುವುದಿಲ್ಲ. ಜ್ಞಾನದ ಕೊರತೆ ಇರುವುದಿಲ್ಲ. ಭತ್ತ ರಾಗಿ ಜೋಳ ಹಣ್ಣು ತರಕಾರಿ ಬೇಳೆಕಾಳುಗಳು ಹೈನುಗಾರಿಕೆ ಕೌಟುಂಬಿಕ ವ್ಯವಸ್ಥೆ ಗೌರವ ಅಭಿಮಾನ ಭಕ್ತಿ ಧೈರ್ಯ ಎಲ್ಲವೂ, ಎಲ್ಲಾ ರೀತಿಯ ಅನುಭಾವಿಕ ವಿಜ್ಞಾನಿಗಳು ರೂಪಗೊಂಡಿದ್ದೇ ಅನಕ್ಷರಸ್ಥರಿಂದ.

ಹಾಗೆಂದು ಅನಕ್ಷರತೆಯನ್ನು ಬೆಂಬಲಿಸುತ್ತಿಲ್ಲ. ಈಗಿನ ಕಾಲಕ್ಕೆ ಎಲ್ಲರೂ ಅಕ್ಷರಸ್ಥರು ಆಗಲೇ ಬೇಕು. ಅದಕ್ಕೆ ಸಂಪೂರ್ಣ ಬೆಂಬಲವಿದೆ. ಆದರೆ ಅನಕ್ಷರಸ್ಥರು ದಡ್ಡರು - ಮೂರ್ಖರು, ವಿವೇಚನೆ ಇಲ್ಲದವರು ಎಂಬ ಟೀಕೆ ದುರಹಂಕಾರದ ಮಾತಾಗುತ್ತದೆ. ಪ್ರಕೃತಿಯ ಸಹಜ ಬದುಕು ಅಕ್ಷರಗಳ ಮೇಲೆ ನಿಂತಿಲ್ಲ. ಅದು ಅನಿವಾರ್ಯವೂ ಅಲ್ಲ. ಬದುಕು ನಿಂತಿರುವುದು ಜೀವಪರ ನಿಲುವಿನ ಮೇಲೆ ಮತ್ತು ಮಾನವೀಯ ಧರ್ಮದ ಮೇಲೆ ಮಾತ್ರ. ಇಂದಿನ ಆಧುನಿಕ ಸಮಾಜಕ್ಕೆ ಅತಿ ಅವಶ್ಯಕವಾಗಿ ಬೇಕಾಗಿರುವುದು ಬುದ್ಧಿವಂತರಿಗಿಂತ ಹೆಚ್ಚಾಗಿ ಹೃದಯವಂತರು.

ಏಕೆಂದರೆ, ಹೃದಯ ವಿಶಾಲವಾಗಿದ್ದರೆ ಮಾತ್ರ ಅಲ್ಲಿ ನಿಜವಾದ ಜ್ಞಾನ ಹೊಮ್ಮುತ್ತದೆ ಸ್ವಾಮಿ ವಿವೇಕಾನಂದ. ಜೊತೆಗೆ ಹೃದಯ ಶುದ್ದವಾಗಿದ್ದರೆ ಜ್ಞಾನ ಅಲ್ಲಿ ಶಾಶ್ವತವಾಗಿ ನೆಲೆಸುತ್ತದೆ. ಎಷ್ಟೊಂದು ಅರ್ಥಪೂರ್ಣ ಮತ್ತು ಅನುಭವದ ಮಾತು. ಇದು ಅಕ್ಷರಶಃ ಸತ್ಯವಾದ ಮಾತು. ನೀವು ಯಾವುದೇ ಕ್ಷೇತ್ರದಲ್ಲಿರಲಿ, ಎಷ್ಟೇ ಪ್ರತಿಭಾವಂತರಾಗಿರಿ ನಿಮ್ಮ ಹೃದಯ ವಿಶಾಲ ಮತ್ತು ಶುದ್ದವಾಗಿಲ್ಲದಿದ್ದರೆ ನೀವು ಎಷ್ಟೇ ಜನಪ್ರಿಯರಾಗಿರಿ, ಎಷ್ಟೇ ಶ್ರೀಮಂತರಾಗಿರಿ, ಎಷ್ಟೇ ದೊಡ್ಡ ಹುದ್ದೆಯಲ್ಲಿರಿ ನಿಮ್ಮ ಜ್ಞಾನ ಒಂದು ಮಿತಿಗೆ ಒಳಪಟ್ಟಿರುತ್ತದೆ. ಆ ಜ್ಞಾನ ಕೃತಕವಾಗಿರುತ್ತದೆಯೇ ಹೊರತು ಸಹಜವಾಗಿರುವುದಿಲ್ಲ. ಅದನ್ನು ಮೇಲ್ನೋಟಕ್ಕೆ ಗುರುತಿಸಲು ಸಾಧ್ಯವಾಗದೆ ಇರಬಹುದು. ಆದರೆ ನಿಜವಾದ ಪ್ರಜ್ಞಾವಂತ ಖಂಡಿತ ಗ್ರಹಿಸಬಲ್ಲ.




ಸಾಹಿತ್ಯ ಸಂಗೀತ ನೃತ್ಯ ಕಲೆ ವಿಜ್ಞಾನ ಯಾವುದೇ ಇರಲಿ ಸಂಕುಚಿತ ಮತ್ತು ಅಶುದ್ಧ ಮನೋಭಾವದ ವ್ಯಕ್ತಿಗಳ ಮನಸ್ಸು ಜ್ಞಾನದ ನೆಲೆಯಾಗಲು ಸಾಧ್ಯವಿಲ್ಲ. ಅದು ತೋರಿಕೆಯ ಒಣ ಪ್ರದರ್ಶನ ಮಾತ್ರ. ಉದಾಹರಣೆಗೆ ಸಾಹಿತ್ಯ ಕ್ಷೇತ್ರದ ಬಗ್ಗೆ ಹೇಳುವುದಾದರೆ, ಸಾಹಿತ್ಯವೆಂಬ ಸಾಗರದಲ್ಲಿ ಈಜಾಡುತ್ತಾ, ಅಕ್ಷರಗಳನ್ನು - ಭಾವನೆಗಳನ್ನು ಅರಿಯುತ್ತಾ, ಓದುತ್ತಾ - ಬರೆಯುತ್ತಾ - ಗ್ರಹಿಸುತ್ತಾ, ಅನುಭವದಲ್ಲಿ ಮೂಡಿದ ಕೆಲವೇ ಹನಿಗಳಂತ ಒಂದು ಅನಿಸಿಕೆ ಯುವ ಸಾಹಿತ್ಯದ ಬರಹಗಾರರಿಗಾಗಿ, ವಿದ್ಯೆಗೆ ವಿನಯವೇ ಭೂಷಣ, ಅಕ್ಷರಗಳಲ್ಲ. ಮನದ ಸಹಜ ಭಾವನೆಗಳಿಗೆ ಅಕ್ಷರ ರೂಪ ಕೊಟ್ಟಾಗ, ಒಂದಷ್ಟು ಗಟ್ಟಿಯಾದ ಸಾಹಿತ್ಯ ಸೃಷ್ಟಿಯಾಗುತ್ತದೆ. ಅಕ್ಷರಗಳಲ್ಲಿಯೇ ಭಾವನೆಗಳನ್ನು ಕಲ್ಪಿಸಿಕೊಂಡು ಮೂಡಿಸಿದಾಗ, ಕೃತಕವಾದ ಬಾಲಿಶ ಸಾಹಿತ್ಯ ರಚನೆಯಾಗುವ ಸಾಧ್ಯತೆಯಿದೆ.

ಇವುಗಳ ನಡುವಿನ ವ್ಯತ್ಯಾಸಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ನಮಗೆ ಇದು ಗೋಚರಿಸುತ್ತದೆ. ಬರಹಗಾರರು ಅರಿಯಬೇಕಾದ ಬಹುಮುಖ್ಯ ಅಂಶವಿದು. ಸಾಹಿತ್ಯದ ಬಗ್ಗೆ ಮಾತನಾಡುವಾಗ ಗಟ್ಟಿ ಸಾಹಿತ್ಯ - ಜನಪ್ರಿಯ ಸಾಹಿತ್ಯ - ಜೊಳ್ಳು ಸಾಹಿತ್ಯ ಎಂದು ಗುರುತಿಸುವುದು ಇದೇ ದೃಷ್ಟಿಕೋನದಲ್ಲಿ. ಸಿನಿಮಾಗಳಲ್ಲಿ ಬಳಸಲ್ಪಡುವ ಬಹುತೇಕ ಸಾಹಿತ್ಯ (ಕೆಲವೊಂದು ಹೊರತು ಪಡಿಸಿ), ಸಂಗೀತ ಸಂಯೋಜನೆಯ ನಂತರ ಅದರ ಭಾವನೆಗಳಿಗೆ ತಕ್ಕಂತೆ ಅಕ್ಷರ ಜೋಡಿಸುವುದು, ಕೆಲವು ಭಾವಗೀತೆಗಳು, ಒಂದಷ್ಟು ಜನ ಕ್ರೇಜಿಯಾಗಿ ಸಾಹಿತ್ಯದಲ್ಲಿ ತೊಡಗಿಸಿಕೊಳ್ಳುವುದು, ಯಾರೋ ಎಲ್ಲೋ ಬರೆದ ಅಥವಾ ಎಂದೋ ಓದಿದ ಸಾಹಿತ್ಯವನ್ನು ಬರೆಯುವ ಕಲಿಯುವ ಆಸೆಯಿಂದ ವಾಕ್ಯ ರಚಿಸುವುದು. ಬರೆಯುವಾಗಲೇ ಮಹತ್ವಾಕಾಂಕ್ಷೆಯ ಮತ್ತು ಪ್ರಶಸ್ತಿ ಸನ್ಮಾನಗಳ ಗುಂಗಿನಲ್ಲಿ ಬರೆಯುವುದು, ಇತರರ ಮೆಚ್ಚುಗೆಗಾಗಿ ಅಕ್ಷರಗಳನ್ನು ಮೂಡಿಸುವುದು ಮುಂತಾದವು ಅಕ್ಷರದಿಂದ ಭಾವನೆಗಳನ್ನು ಮೂಡಿಸುವ ಸಾಹಿತ್ಯಕ್ಕೆ ಉದಾಹರಣೆಗಳು.

ಅದೇ ರೀತಿ ಕೆಲವರ ಸಾಹಿತ್ಯ, ಭಾವನೆಗಳಿಗೆ ಅಕ್ಷರ ರೂಪ ಕೊಡುವುದಕ್ಕೆ ಉದಾಹರಣೆಗಳು. ಅವರುಗಳು ತಮ್ಮ ಬದುಕಿನ ಅನುಭವದ - ಅರಿವಿನ - ಗ್ರಹಿಕೆಯ ವಿಷಯಗಳನ್ನು ಅಂತರಾಳದ ಭಾವನೆಗಳಿಗೆ ಅಕ್ಷರದ ರೂಪ ನೀಡುತ್ತಾರೆ. ಅದು ನಿಜವಾದ ಸಾಹಿತ್ಯಾಸಕ್ತರಿಗೆ ಗಾಢವಾದ ಅನುಭವ ನೀಡುತ್ತದೆ. ಅವರ ಚಿಂತನೆಗಳಲ್ಲಿ, ನಿರೂಪಣೆಯಲ್ಲಿ, ವಿಷಯಗಳಲ್ಲಿ, ಸಾಹಿತ್ಯದ ಪ್ರಕಾರಗಳಲ್ಲಿ ಭಿನ್ನತೆ ಇರಬಹುದು. ಆದರೆ ಅನುಭವ ಸಾಹಿತ್ಯ ಅದಾಗಿರುತ್ತದೆ.

ಕೆಲಮೊಮ್ಮೆ ಅಪರೂಪಕ್ಕೆ ಇದಕ್ಕೆ ವಿರುದ್ಧವಾದ ರೀತಿಯ ರಚನೆಗಳೂ ಸೃಷ್ಟಿಯಾಗಬಹುದು. ಅಂದರೆ ಭಾವನೆಗಳಲ್ಲಿ ಅತ್ಯುತ್ತಮ ಗಾಢತೆ ಇದ್ದರೂ ಅಕ್ಷರಗಳಲ್ಲಿ ಅವು ಪೇಲವವಾಗಿ ಮೂಡಬಹುದು ಹಾಗೆಯೇ ಅಕ್ಷರಗಳಿಂದಲೇ ಅತ್ಯುತ್ತಮ ಎನ್ನುವ ಭಾವನೆಗಳ ಸಾಹಿತ್ಯವೂ ರಚನೆಯಾಗಬಹುದು. ಕೆಲವು ಸಿನಿಮಾ ಹಾಡುಗಳಲ್ಲಿ ಇದು ಕಂಡುಬರುತ್ತದೆ. ಆದರೆ ಇದು ಅತಿ ವಿರಳ. ಓದು ಮುಖ್ಯ. ಗ್ರಹಿಕೆ ಅತಿಮುಖ್ಯ. ಮಾನವೀಯ ಸ್ಪಂದನೆ ಎಲ್ಲಕ್ಕಿಂತ ಮುಖ್ಯ.

ಇದೊಂದು ಸಣ್ಣ ಮತ್ತು ಸರಳ ಅನಿಸಿಕೆ ಅಷ್ಟೆ. ಸಾಹಿತ್ಯದ ಆಳದಲ್ಲಿ ಅಗಾಧ ನಿಗೂಡತೆ ಮತ್ತು ಕ್ರಿಯಾತ್ಮಕತೆ ಅಡಗಿದೆ. ಅದನ್ನು ಇಷ್ಟೇ ಎಂದು ಭಾವನೆಗಳಲ್ಲಿ - ಅಕ್ಷರಗಳಲ್ಲಿ ಹಿಡಿದಿಡುವುದು ಅಸಾಧ್ಯ. ಭಾವನೆಗಳನ್ನು ವ್ಯಕ್ತಪಡಿಸುವ ಮಾಧ್ಯಮ ಭಾಷೆ. (ಮಾತನಾಡುವವರಿಗೆ) ಆ ಭಾಷೆಯಲ್ಲಿಯೇ ಮತ್ತೊಬ್ಬರ ಆತ್ಮವನ್ನೂ ಪ್ರವೇಶಿಸಬಹುದು. ಆ ಆತ್ಮದೊಂದಿಗೆ ಬೆರೆತು ಸಂವಾದವನ್ನೂ ನಡೆಸಬಹುದು. ಆ ಸಂವಾದದಲ್ಲಿ ಆತ್ಮದ ಐಕ್ಯವಾಗಬಹುದು. ಹಾಗೇ ಆತ್ಮಮಿಲನವಾದ ಸಂಬಂಧಗಳನ್ನು ಯಾರೂ ಬೇರ್ಪಡಿಸಲು ಸಾಧ್ಯವಿಲ್ಲ. ಇದು ಅಕ್ಷರಗಳಲ್ಲಿ ಮೂಡಿದ ಭಾವನೆಯಲ್ಲ, ಒಡಲಾಳದ ಭಾವನೆಗಳಿಗೆ ನೀಡಿದ ಅಕ್ಷರ ರೂಪ.

ಸಂಕುಚಿತ ಮನೋಭಾವದ ಅಸಭ್ಯತೆ, ಕುಹುಕ, ವ್ಯಂಗ್ಯ ಎಲ್ಲವೂ ಹೇಳುವವನ ಯೋಗ್ಯತೆಯನ್ನು ತೋರಿಸುತ್ತದೆಯೇ ಹೊರತು ಕೇಳಿಸಿಕೊಂಡವನ ಯೋಗ್ಯತೆಯನ್ನಲ್ಲ ಎಂಬುದು ಸಹ ಇಲ್ಲಿ ಮುಖ್ಯವಾಗುತ್ತದೆ. ಒಟ್ಟಿನಲ್ಲಿ ಯಾವುದೇ ಕ್ಷೇತ್ರದ ಜ್ಞಾನದ ಮೂಲ ಹೃದಯ ವೈಶಾಲ್ಯತೆ ಮತ್ತು ಶುದ್ಧತೆ ಎಂಬುದು ವಾಸ್ತವ ಸತ್ಯ. ಇದು ಎಲ್ಲರ ಮನದ ಮೂಲೆಯಲ್ಲಿ ಸದಾ ನೆನಪಾಗಿರಲಿ ಎಂದು ಆಶಿಸುತ್ತಾ...

– **ವಿವೇಕಾನಂದ. ಎಚ್. ಕೆ.,** ಬೆಂಗಳೂರು



## ಮರೆಯಾದ ಈಚಲು ಮರಗಳು, ಅಂದಿನ ಬಾಲ್ಯ

ಒಂದು ಹಣ್ಣು ಒಂದು ಕಾಲಯಂತ್ರ (ಟೈಮ್ ಮೆಶೀನ್). ಬಾಯಲ್ಲಿ ಆ ಸಿಹಿ-ಒಗರಿನ ಮಿಶ್ರ ರಸ ಒಡೆದ ಕ್ಷಣ ನೀವು 2026ರಲ್ಲಿ ಇರುವುದಿಲ್ಲ. ನೀವು ಮತ್ತೆ ಎಂಟು ವರ್ಷದ ಆ ಹುಡುಗ! ಶಾಲೆಯ ಚೀಲ ಬೆನ್ನಿಗೆ ತೂಗುತ್ತಿದೆ, ಸಂಜೆಯ ಬಿಸಿಲು ಕಡಿಮೆಯಾಗುತ್ತಿದೆ, ಊರಿನ ಸದ್ದು ದೂರದಿಂದ ತೇಲಿ ಬರುತ್ತಿದೆ. ಮುಳ್ಳಿನ ನಡುವೆ ಕೈ ಹಾಕುತ್ತೀರಾ... ಗೊನೆ ಸಿಕ್ಕಿತು, ಗೊನೆ ಎಳೆದದ್ದಾಯಿತು! ಮನಸ್ಸಿನಲ್ಲಿ ಅಪ್ಪಳಿಸುವ ಆ ತೃಪ್ತಿ, ಬೆರಳಿನ ಮೇಲೆ ಮೂಡಿದ ಚಿಕ್ಕ ರಕ್ತದ ಚುಕ್ಕೆ, ಚಡ್ಡಿಯ ಜೇಬನ್ನು ಈಚಲು ಹಣ್ಣುಗಳಿಂದ ತುಂಬಿಸಿಕೊಂಡು ಮನೆಗೆ ನಡೆದ ಬಾಲ್ಯದ ನೆನಪು ಇವೆಲ್ಲದರ ಚಿತ್ರಣ ಕಣ್ಣಮುಂದೆ ಕಟ್ಟಿಬಿಡುತ್ತದೆ!

ಆಗಿನ ದಿನಗಳಲ್ಲಿ ಅಪ್ಪ ಎಷ್ಟೇ ಗದರಿಸಲಿ, ಅಮ್ಮ ಅದೆಷ್ಟೇ ಸಾರಿ ಬೇಡ ಎನ್ನಲಿ, ಮುಂದಿನ ಬೇಸಿಗೆಗೂ ಎಲ್ಲರೂ ಈಚಲು ಹುಡುಕಿಕೊಂಡು ಹೋಗುವುದೇ! ಎಂದಿನವರೆಗೆ ಆ ಮರ ಇರುತ್ತಿತ್ತೋ ಎಂದಿನವರೆಗೆ ಆ ಮುಳ್ಳಿನ ನಡುವೆ ಸಿಹಿ ಇರುತ್ತಿತ್ತೋ ಅಂದಿನವರೆಗೆ ಆ ಬಾಲ್ಯವೂ ಜೀವಂತವಾಗಿರುತ್ತಿತ್ತು.

ಈಚಲು ಬರೀ ಹಣ್ಣಿನ ಮರವಲ್ಲ; ಅದೊಂದು ಜೀವನಾಧಾರ. ಅದರ ಎಲೆಗಳಿಂದ ಚಾಪೆ, ಬುಟ್ಟಿ, ಬೆಲ್ಲದ ಗೊಬ್ಬೆ, ಬೀಸಣಿಗೆಯನ್ನು ಹೆಣೆಯುತ್ತಿದ್ದರು. ಅದರ ಕಾಂಡದಿಂದ ತೆಗೆದ ರಸವನ್ನು ಕುದಿಸಿ ಈಚಲ ಬೆಲ್ಲ ಎಂಬ ಪ್ರತ್ಯೇಕ ಜಾತಿಯ ಬೆಲ್ಲವನ್ನು ತಯಾರಿಸುತ್ತಿದ್ದರು. ಬಂಗಾಲದ ಪ್ರಸಿದ್ಧ ಖೇಜುರ್ ಗುಡ್ ಎಂದರೆ ಇದೇ ಈಚಲು ಬೆಲ್ಲ. ಅಂದರೆ ಈ ಮರ ನಾವು ಗಮನಿಸದ ಒಂದು ಪೂರ್ಣ ಕಾಟೇಜ್ ಉದ್ಯಮ, ತನ್ನಲ್ಲೇ ಒಂದು ಜೈವಿಕ ಚಕ್ರ! ಹಣ್ಣಿಗಾಗಿ ಮಕ್ಕಳಿಗೆ, ಎಲೆಗಳಿಗಾಗಿ ಮಹಿಳೆಯರಿಗೆ, ರಸಕ್ಕಾಗಿ ಪುರುಷರಿಗೆ ಹೀಗೆ ಇಲ್ಲಿ ಯಾವುದೂ ವ್ಯರ್ಥವಲ್ಲ. ಇಂಥ ಸಮಗ್ರತೆ ಆಧುನಿಕ ಜೀವನದಲ್ಲಿ ಇನ್ಯಾವ ಮರದಲ್ಲಿ ಸಿಗುತ್ತದೆ?

ಈಗ ಊರಿಗೆ ಹೋದರೆ ಈಚಲು ಮರಗಳು ಎಷ್ಟು ಉಳಿದಿವೆ? ಗದ್ದೆಗಳಲ್ಲಿ ಟ್ರ್ಯಾಕ್ಟರ್ ಬಂದ ಮೇಲೆ ಬದುಗಳು ಚೌಕವಾದವು. ನಿಮ್ಮ ಬದುವಿನ ಆ ಮುಳ್ಳಿನ ಮರ ತೆಗೆಸಿಬಿಡಿ, ಟ್ರ್ಯಾಕ್ಟರಿಗೆ ತೊಂದರೆಯಾಗುತ್ತದೆ ಎಂಬ ಒಂದು ಪ್ರಾಯೋಗಿಕ ಸಲಹೆಗೆ ಒಂದೊಂದಾಗಿ ಆ ಮರಗಳು ನೆಲಕ್ಕುರುಳಿದವು. ಅವುಗಳ ಜಾಗದಲ್ಲಿ ಇಂದು ಸಿಮೆಂಟ್ ಕಲ್ಲು, ತಂತಿ ಬೇಲಿ, ಬೋರ್‌ವೆಲ್‌ನ ಪೈಪುಗಳು ಪ್ರತ್ಯಕ್ಷವಾಗಿವೆ. ಇನ್ನು ಜೆಸಿಬಿ ಬಂದ ಮೇಲಂತೂ ಎಲ್ಲವೂ ನೆಲಸಮ! ಈಚಲು ಇರಲಿ, ಬೇಲಿಗಳಲ್ಲಿದ್ದ ಕವಳೆ, ಕಾರೆ, ಸೀಮೆ ಹುಣಸೆ ಎಲ್ಲವೂ ಮಾಯವಾದವು. ಹುಣಸೆ ಮರಗಳನ್ನು ಕೂಡ ಹಾಗೆಯೇ ಬಿಡದ ಕಾಲವಿದು.

ಆದರೆ, ಯಾರೂ ಕಳೆದುಕೊಂಡ ಈ ಮರಗಳಿಗಾಗಿ ಶೋಕಾಚರಣೆ ಮಾಡಲಿಲ್ಲ; ಒಂದು ಈಚಲ ಮರಕ್ಕಾಗಿ ಯಾರೂ ಪ್ರತಿಭಟಿಸಲಿಲ್ಲ, ಪತ್ರಿಕೆಗಳಲ್ಲಿ ಲೇಖನಗಳೂ ಬರಲಿಲ್ಲ. ಆದರೆ ಆ ಮರಗಳೊಂದಿಗೆ ನಾಶವಾದದ್ದು ಬರೀ ಮರಗಳಲ್ಲ ಆ ಬದುಗಳ ಮೇಲೆ ಆಡುತ್ತಿದ್ದ ಪಿಪೀಲಿಕಗಳು (ಇರುವೆಗಳು), ಗೊನೆಯಲ್ಲಿ ಗೂಡು ಕಟ್ಟುತ್ತಿದ್ದ ಗುಬ್ಬಿಗಳು, ಆ ನೆರಳಿನಲ್ಲಿ ಮಧ್ಯಾಹ್ನ ಮಲಗುತ್ತಿದ್ದ ಎತ್ತುಗಳು, ಎಲೆಗಳ ನಡುವೆ ಬಚ್ಚಿಟ್ಟುಕೊಳ್ಳುತ್ತಿದ್ದ ಅಳಿಲುಗಳು... ಅದೊಂದು ಸಂಪೂರ್ಣ ಸಣ್ಣ ಜೈವಿಕ ಸಾಮ್ರಾಜ್ಯವೇ ಆಗಿತ್ತು!

ಮಾಯವಾದ ಆ ಮರಗಳೊಂದಿಗೆ ನಾವೆಲ್ಲರೂ ಮುಖ್ಯವಾಗಿ ಕಳೆದುಕೊಂಡದ್ದು ಆ ಮುಳ್ಳುಗಳ ನಡುವೆ ಕೈಹಾಕಿ, ಬೆರಳು ಗೀಚಿಸಿಕೊಂಡು, ಗೊನೆ ಎಳೆಯುತ್ತಿದ್ದ ಒಂದು ಇಡೀ ತಲೆಮಾರಿನ ಸೊಗಸಾದ ಬಾಲ್ಯದ ಅನುಭವವನ್ನು.

– **ಹರಿ ಪ್ರಸಾದ್** ನಾಡಿಗ್

## ಉಕ್ಕಿನ ಮನುಷ್ಯ...

ಸಮಾಜ ವಿಜ್ಞಾನದ ಮೇಷ್ಟ್ರು ರಮೇಶ್ ಎಂಟನೆಯ ತರಗತಿಯ ಮಧ್ಯ ವಾರ್ಷಿಕ ಪರೀಕ್ಷೆಯಲ್ಲಿ ಭಾರತದ ಉಕ್ಕಿನ ಮನುಷ್ಯ ಯಾರು? ಯಾಕೆ ಕರೆಯುತ್ತಾರೆ? ಎಂಬ ಪ್ರಶ್ನೆಯನ್ನು ಎರಡು ಅಂಕಕ್ಕೆ ನೀಡಿದ್ದರು.

ಆ ಪ್ರಶ್ನೆಗೆ ಮುರಳಿ ಎಂಬ ವಿದ್ಯಾರ್ಥಿ ಬರೆದ ಉತ್ತರ ಗುಜರಾತಿನಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಪ್ರತಿಮೆಯನ್ನು ಮೂರು ಸಾವಿರ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕೇಂದ್ರ ಸರ್ಕಾರ ನಿರ್ಮಾಣ ಮಾಡಿದೆ. ಇದು ಜಗತ್ತಿನ ಅತಿ ಎತ್ತರದ ಪ್ರತಿಮೆ ಆಗಿದೆ. ಏಕತೆಯ ಮೂರ್ತಿ ಎಂದು ಕರೆಯುವ ಈ ಪ್ರತಿಮೆಯನ್ನು ಉಕ್ಕಿನಿಂದ ನಿರ್ಮಾಣ ಮಾಡಿರುವುದರಿಂದ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರನ್ನು ಉಕ್ಕಿನ ಮನುಷ್ಯ ಅಂತ ಕರೆಯುತ್ತಾರೆ. ಈ ಉಕ್ಕಿನ ಮನುಷ್ಯನ ಪ್ರತಿಮೆಯ ಬಗ್ಗೆ ಇನ್ನಷ್ಟು ಬರೆಯಬಹುದು. ಆದರೆ ಪ್ರಸ್ತುತ ಪ್ರಶ್ನೆಗೆ ಅಂಕಗಳು ಎರಡಕ್ಕೆ ಸೀಮಿತವಾಗಿರುವುದರಿಂದ ಇಷ್ಟು ಸಾಕು ಅಂತ ಎನಿಸುತ್ತಿದೆ ಎಂದು ಮುರಳಿ ಬರೆದಿದ್ದ.

– **ಮಲ್ಲಿಕಾರ್ಜುನ** ಸುರಧೇನುಪುರ



“ಒಂಬತ್ತು ಗುಂಡುಗಳು ಅವರ ಹೊಟ್ಟೆ, ಶ್ವಾಸಕೋಶ ಮತ್ತು ಯಕೃತ್ತನ್ನು ಛಿದ್ರಗೊಳಿಸಿದ್ದವು. ರಕ್ತದ ಮಡುವಿನಲ್ಲಿ ಕುಸಿದು ಬಿದ್ದ ಸ್ಯಾಮ್ ಅವರನ್ನು ನೋಡಿ, ಜತೆಗಿದ್ದವರು ಅವರು ಬದುಕುವುದು ಅಸಾಧ್ಯವೆಂದೇ ಭಾವಿಸಿದ್ದರು. ಅವರ ಅದಮ್ಯ ಶೌರ್ಯವನ್ನು ಕಣ್ಣಾರೆ ಕಂಡಿದ್ದ ಕಮಾಂಡಿಂಗ್ ಆಫೀಸರ್ ಮೇಜರ್ ಜನರಲ್ ಡೇವಿಡ್ ಕೋವನ್ ಓಡಿ ಬಂದು ಸ್ಯಾಮ್ ಅವರ ಸ್ಥಿತಿಯನ್ನು ಕಂಡರು.

## ಸಾವನ್ನು ನಗುತ್ತಲೇ ಗೆದ್ದ ಅಪ್ರತಿಮ ವೀರ: ಸ್ಯಾಮ್ ಮಾಣೆಕ್‌ಶಾ

ಒಂದೊಳ್ಳೆ ಮಾತು

1942ರಲ್ಲಿ ಎರಡನೇ ಮಹಾಯುದ್ಧದ ಜಗತ್ತನ್ನು ಜ್ವಾಲೆ ಇಡೀ ಆವರಿಸಿತ್ತು. ಬರ್ಮಾದ ಈಗಿನ ಮ್ಯಾನ್ಮಾರ್) ದಟ್ಟ ಕಾಡುಗಳಲ್ಲಿ ಜಪಾನಿ ಸೈನಿಕರ ಅಬ್ಬರ ಜೋರಾಗಿತ್ತು. ಅಲ್ಲಿನ ಸಿಟ್ಟಾಂಗ್ ಸೇತುವೆಯ ಬಳಿ ನಡೆದ ಆ ಭೀಕರ ಯುದ್ಧ, ಇತಿಹಾಸದ ಪುಟಗಳಲ್ಲಿ ಅಳಿಸಲಾಗದ ಸ್ಮರಣೆಯಾಗಿ ಉಳಿದಿದೆ. ಆ ಯುದ್ಧ ಭೂಮಿಯಲ್ಲಿ ಬ್ರಿಟಿಷ್ ಇಂಡಿಯನ್ ಆರ್ಮಿಯ 4/12 ಫ್ರಾಂಟಿಯರ್ ಫೋರ್ಸ್ ರೆಜಿಮೆಂಟ್‌ನ ಯುವ ಕ್ಯಾಪ್ಟನ್ ಒಬ್ಬರು ನಡುಕ ಶತ್ರುಗಳ ಎದೆಯಲ್ಲಿ ಹುಟ್ಟಿಸುತ್ತಿದ್ದರು.

ಅವರೇ ಸ್ಯಾಮ್ ಮಾಣೆಕ್‌ಶಾ. ಜಪಾನಿ ಪಡೆಗಳು ಮುನ್ನುಗ್ಗುತ್ತಿದ್ದಂತೆ, ಸ್ಯಾಮ್ ಅವರ ತುಕಡಿಯ ಮೇಲೆ ಗುಂಡಿನ ಮಳೆ ಸುರಿಯಲಾರಂಭಿಸಿತು. ಪರಿಸ್ಥಿತಿ ಕೈ ಮೀರುತ್ತಿರುವುದನ್ನು ಕಂಡ ಸ್ಯಾಮ್, ಸೈನಿಕರಲ್ಲಿ ಧೈರ್ಯ ತುಂಬಲು ಸ್ವತಃ ರಣರಂಗದ ಮುಂಚೂಣಿಗೆ ಬಂದರು. ತಮ್ಮ ಸಹೋದ್ಯೋಗಿಗಳು ಸುರಕ್ಷಿತವಾಗಿ ಹಿಂದೆ ಸರಿಯಲು ದಾರಿ ಮಾಡಿ ಕೊಡುವ ಸಲುವಾಗಿ ಅವರು ಪ್ರತಿ-ದಾಳಿಯನ್ನ ನಡೆಸಿದರು. ಆದರೆ, ಆ ಭೀಕರ ಹೋರಾಟದ ಮಧ್ಯೆ, ಶತ್ರುಗಳ ಮೆಷಿನ್ ಗನ್‌ನಿಂದ ಸಿಡಿದ ಸರಣಿ ಗುಂಡುಗಳು ನೇರವಾಗಿ ಸ್ಯಾಮ್ ಅವರ ದೇಹವನ್ನು ತೂರಿ ಹೋದವು.

ಒಂಬತ್ತು ಗುಂಡುಗಳು ಅವರ ಹೊಟ್ಟೆ, ಶ್ವಾಸಕೋಶ ಮತ್ತು ಯಕೃತ್ತನ್ನು ಛಿದ್ರ ಗೊಳಿಸಿದ್ದವು. ರಕ್ತದ ಮಡುವಿನಲ್ಲಿ ಕುಸಿದು ಬಿದ್ದ ಸ್ಯಾಮ್ ಅವರನ್ನು ನೋಡಿ, ಜತೆಗಿದ್ದವರು ಅವರು ಬದುಕುವುದು ಅಸಾಧ್ಯವೆಂದೇ ಭಾವಿಸಿದ್ದರು. ಅವರ ಅದಮ್ಯ ಶೌರ್ಯವನ್ನು ಕಣ್ಣಾರೆ ಕಂಡಿದ್ದ ಕಮಾಂಡಿಂಗ್ ಆಫೀಸರ್ ಮೇಜರ್ ಜನರಲ್ ಡೇವಿಡ್ ಕೋವನ್ ಓಡಿ ಬಂದು ಸ್ಯಾಮ್ ಅವರ ಸ್ಥಿತಿಯನ್ನು ಕಂಡರು.

ಸತ್ತ ನಂತರ ಯಾರಿಗೂ ಮಿಲಿಟರಿ ಕ್ರಾಸ್ ಪದಕ ನೀಡುವುದಿಲ್ಲ ಎಂದು ಭಾವಿಸಿದ ಕೋವನ್, ತಕ್ಷಣ ತಮ್ಮ ಎದೆಯ ಮೇಲಿದ್ದ ಮಿಲಿಟರಿ ಕ್ರಾಸ್ ಪದಕವನ್ನು ತೆಗೆದು ಸ್ಯಾಮ್ ಅವರ ಎದೆಯ ಮೇಲೆ ತೊಡಿಸಿದರು. ಅದು ಒಬ್ಬ ವೀರನಿಗೆ ಯುದ್ಧಭೂಮಿಯ ಸಿಕ್ಕ ಅತ್ಯುನ್ನತ ಗೌರವವಾಗಿತ್ತು.

ಅರೆಪ್ರಜ್ಞಾವಸ್ಥೆಯಲ್ಲಿದ್ದ ಸ್ಯಾಮ್ ಅವರನ್ನು ಹೇಗೋ ಮಾಡಿ ಫೀಲ್ಡ್ ಆಸ್ಪತ್ರೆಗೆ ಸಾಗಿಸಲಾಯಿತು. ಅಲ್ಲಿನ ಆಸ್ಟ್ರೇಲಿಯನ್ ಸರ್ಜನ್ ಸ್ಯಾಮ್ ಇವರ ದಾರುಣ ಸ್ಥಿತಿಯನ್ನು ನೋಡಿದಾಗ, ಸಾವಿನ ಅಂಚಿನಲ್ಲಿದ್ದರೂ ಸ್ಯಾಮ್ ಅವರಲ್ಲಿನ ಹಾಸ್ಯಪ್ರಜ್ಞೆ ಬತ್ತಿರಲಿಲ್ಲ. ಅವರು ನಿಧಾನವಾಗಿ, ನನ್ನನ್ನು ಒಂದು ಕತ್ತೆ ಒದೆಯಿತು! ಎಂದು ಪಿಸುಗುಟ್ಟಿದ್ದರಂತೆ.


ಅಷ್ಟು ನೋವಿನಲ್ಲೂ ತಮಾಷೆ ಮಾಡುತ್ತಿದ್ದ ಆ ಮನುಷ್ಯನ ಬದುಕುವ ಛಲವನ್ನು ಕಂಡ ವೈದ್ಯರು ಆಶ್ಚರ್ಯಚಕಿತರಾದರು. ಯಾವ ಮನುಷ್ಯ ಸಾವು ಹತ್ತಿರವಿದ್ದಾಗಲೂ ಇಷ್ಟು ಧೈರ್ಯದಿಂದ ನಗಬಲ್ಲನೋ, ಅವನು ಖಂಡಿತಾ ಬದುಕುತ್ತಾನೆ ಎಂದು ಹೇಳಿ ಅತ್ಯಂತ ಅಪಾಯಕಾರಿ ಶಸ್ತ್ರಚಿಕಿತ್ಸೆ ನಡೆಸಿ ಸ್ಯಾಮ್ ಅವರನ್ನು ಬದುಕಿಸಿದರು.

ಆದರೆ, ಈ ಘಟನೆ ಅವರ ವೃತ್ತಿಜೀವನದ ಅಂತ್ಯವಾಗಲಿಲ್ಲ, ಬದಲಾಗಿ ಅದೊಂದು ಹೊಸ ಯುಗದ ಆರಂಭವಾಗಿತ್ತು. ಮುಂದೆ ಅವರು ಭಾರತೀಯ ಸೇನೆಯಲ್ಲಿ ಉನ್ನತ ಸ್ಥಾನಕ್ಕೇರುತ್ತಾ ಹೋದರು. ಸುಮಾರು ಮೂರು ದಶಕಗಳ ನಂತರ, 1971ರ ಇಂಡೋ-ಪಾಕ್ ಯುದ್ಧದ ಸಮಯದಲ್ಲಿ ಭಾರತೀಯ ಸೇನಾ ಮುಖ್ಯಸ್ಥರಾಗಿ ಅವರು ತೋರಿದ ಚಾಣಾಕ್ಷ ತನ ಮತ್ತು ನಾಯಕತ್ವ ಇಡೀ ವಿಶ್ವವೇ ಬೆರಗಾಗುವಂತೆ ಮಾಡಿತು.

ಬಾಂಗ್ಲಾದೇಶದ ಉದಯಕ್ಕೆ ಕಾರಣವಾದ ಐತಿಹಾಸಿಕ ಜಯದ ರೂವಾರಿ ಸ್ಯಾಮ್ ಮಾಣೆಕ್‌ಶಾ ಅವರೇ ಆಗಿದ್ದರು. 1973ರಲ್ಲಿ ಅವರು ಭಾರತದ ಮೊದಲ ಫೀಲ್ಡ್ ಮಾರ್ಷಲ್ ಆಗಿ ಗೌರವಿಸಲ್ಪಟ್ಟರು. ಬರ್ಮಾದ ಕಾಡಿನಲ್ಲಿ ಹೆಣವಾಗಿ ಬೀಳಬೇಕಿದ್ದ ಒಬ್ಬ ಯುವ ಅಧಿಕಾರಿ, ತನ್ನ ಅಪ್ರತಿಮ ಆತ್ಮವಿಶ್ವಾಸ ಮತ್ತು ಧೈರ್ಯದಿಂದ ದಕ್ಷಿಣ ಏಷ್ಯಾದ ಇತಿಹಾಸವನ್ನೇ ಬದಲಿಸಿದರು.

ಬದುಕುವ ಛಲ ಮತ್ತು ಪರಿಸ್ಥಿತಿಯನ್ನು ಎದುರಿಸುವ ಸಮಯಪ್ರಜ್ಞೆ ಇದ್ದರೆ, ಸಾವಿನ ಹೊಸ್ತಿಲಿನಿಂದಲೂ ಮರಳಿ ಬಂದು ಬದುಕಲ್ಲಿ ಗೆದ್ದು ತೋರಿಸಬಹುದು. ಇಂತಹ ನೂರಾರು ಉದಾಹರಣೆ ನಮ್ಮ ಸುತ್ತಲೂ ಸಿಗುತ್ತದೆ. ಜೀವನೋತ್ಸಾಹ ನಮ್ಮೊಳಗೆ ಹುಟ್ಟಬೇಕು ಅಷ್ಟೇ.

– **ರೂಪಾ** ಗುರುರಾಜ್



## ಮದುವೆ - ಅಂದು ಮತ್ತು ಇಂದು

ಮದುವೆ ಎಂಬುದು ಪ್ರತಿಯೊಬ್ಬರ ಜೀವನದಲ್ಲಿ ಅತ್ಯಂತ ಪವಿತ್ರವಾದ ಮತ್ತು ವಿಶಿಷ್ಟವಾದ ಘಟ್ಟ. ಇಂದು ಮದುವೆ ಎಂಬುದು ಒಂದು ಪವಿತ್ರ ಸಂಸ್ಕಾರವಾಗಿ ಉಳಿಯುವ ಬದಲು, ಕೇವಲ ಪ್ರದರ್ಶನಕ್ಕಾಗಿ ಮಾಡುವ ಒಂದು ಕಾರ್ಯಕ್ರಮದಂತೆ ಬದಲಾಗುತ್ತಿದೆ. ಹಳೆಯ ಕಾಲದ ಮದುವೆಗಳಲ್ಲಿ ಇದ್ದ ಆ ಆತ್ಮೀಯತೆ ಮತ್ತು ದೈವಿಕ ಭಾವ ಇಂದು ಮರೆಯಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಪ್ರಿ-ವೆಡ್ಡಿಂಗ್ ಫೋಟೋಶೂಟ್, ಅಬ್ಬರದ ಡಿಜೆ ಶಬ್ದ, ಮದುವೆಯ ಮಂಟಪದಲ್ಲಿ ಸಿನಿಮಾ ಹಾಡುಗಳಿಗೆ ಡ್ಯಾನ್ಸ್ ಮಾಡುವುದು ಮತ್ತು ಕೇವಲ ರೀಲ್ಸ್‌ಗಳಿಗಾಗಿ ನಟಿಸುವುದು ಹೆಚ್ಚಾಗುತ್ತಿದೆ. ಮದುವೆಯ ಅಸಲಿ ಗಾಂಭೀರ್ಯ ಮತ್ತು ಮೆರುಗು ಈ ಕೃತ್ರಿಮ ಪ್ರದರ್ಶನಗಳಿಂದಾಗಿ ಕಳೆದುಹೋಗುತ್ತಿದೆ.

**ಸಂಪ್ರದಾಯದ ಸೊಗಸು:** ಅಂದು ಮದುವೆಯೆಂದರೆ ಕೇವಲ ಇಬ್ಬರು ವ್ಯಕ್ತಿಗಳ ಒಕ್ಕೂಟವಲ್ಲ, ಎರಡು ಕುಟುಂಬಗಳ ಮಿಲನವಾಗಿತ್ತು. ಶಾಸ್ತ್ರಗಳು ಮತ್ತು ಮಂತ್ರಗಳ ಅರ್ಥಕ್ಕೆ ಹೆಚ್ಚಿನ ಮಹತ್ವವಿತ್ತು.

**ಸರಳತೆಯೇ ಸೌಂದರ್ಯ:** ಯಾವುದೇ ಅಬ್ಬರದ ಸಂಗೀತವಿಲ್ಲದೆ, ಮಂಗಳ ವಾದ್ಯಗಳ (ನಾದಸ್ವರ) ನಡುವೆ ನಡೆಯುತ್ತಿದ್ದ ಮದುವೆಗಳು ಮನಸ್ಸಿಗೆ ನೆಮ್ಮದಿ ನೀಡುತ್ತಿದ್ದವು.

**ನೆನಪುಗಳು ಪ್ರದರ್ಶನ:** ಅಂದು ನೆನಪುಗಳನ್ನು ಮನಸ್ಸಿನಲ್ಲಿ ಉಳಿಸಿಕೊಳ್ಳುತ್ತಿದ್ದರು, ಇಂದು ಅದನ್ನು ಕೇವಲ ಕ್ಯಾಮೆರಾ ಮತ್ತು ಸೋಶಿಯಲ್ ಮೀಡಿಯಾಗಾಗಿ ಸೃಷ್ಟಿಸಲಾಗುತ್ತಿದೆ.

ವಿಶೇಷತೆ ಹಳೆಯ ಕಾಲದ ಮದುವೆ (ಸಂಪ್ರದಾಯಬದ್ಧ) ಇಂದಿನ ಮದುವೆ (ಆಧುನಿಕ ವೈಭವ) ಮುಖ್ಯ ಉದ್ದೇಶ ಮದುವೆ ಒಂದು ಪವಿತ್ರ ಸಂಸ್ಕಾರ ಮತ್ತು ಆಧ್ಯಾತ್ಮಿಕ ಸಂಬಂಧ ಎಂಬ ನಂಬಿಕೆ ಇತ್ತು. ಮದುವೆ ಒಂದು ಸಾಮಾಜಿಕ ಪ್ರದರ್ಶನ ಮತ್ತು ಸಂಭ್ರಮದ ಕೂಟವಾಗಿ ಮಾರ್ಪಟ್ಟಿದೆ. ಪರಿಸರ ಮತ್ತು ಸಂಗೀತ ಮಂತ್ರಘೋಷಗಳು, ನಾದಸ್ವರ ಮತ್ತು ಮೌಲ್ಯಯುತ ಜಾನಪದ ಹಾಡುಗಳಿಂದ ಮನಸ್ಸಿಗೆ ಶಾಂತಿ ಸಿಗುತ್ತಿತ್ತು. ಅಬ್ಬರದ ಡಿಜೆ, ಐಟಂ ಸಾಂಗ್‌ಗಳು ಮತ್ತು ಕರ್ಕಶ ಶಬ್ದದಿಂದಾಗಿ ಮದುವೆಯ ಗಾಂಭೀರ್ಯವೇ ನಶಿಸುತ್ತಿದೆ. ವಧು-ವರರ ನಡವಳಿಕೆ ವಧು-ವರರಲ್ಲಿ ವಿನಯ, ನಾಚಿಕೆ ಮತ್ತು ಆ ಸಂಪ್ರದಾಯದ ಬಗ್ಗೆ ಭಕ್ತಿ ಇರುತ್ತಿತ್ತು. ಕ್ಯಾಮೆರಾ ಮುಂದೆ ರೀಲ್‌ಗಾಗಿ ನಟಿಸುವುದು, ವೇದಿಕೆಯ ಮೇಲೆ ಅಸಹಜವಾಗಿ ನೃತ್ಯ ಮಾಡುವುದು ಹೆಚ್ಚಾಗಿದೆ. ಫೋಟೋಗ್ರಫಿ ಸಹಜವಾದ ಕ್ಷಣಗಳನ್ನು ಸೆರೆಹಿಡಿಯಲಾಗುತ್ತಿತ್ತು.

ಫೋಟೋಗಳು ಜೀವನದ ನೆನಪುಗಳಾಗಿದ್ದವು. ಪ್ರಿ-ವೆಡ್ಡಿಂಗ್ ಶೂಟ್ ಹೆಸರಿನಲ್ಲಿ ಕೃತಕ ಭಂಗಿಗಳು ಮತ್ತು ಕೇವಲ ಸೋಶಿಯಲ್ ಮೀಡಿಯಾ ಲೈಕ್ಸ್‌ಗಾಗಿ ಫೋಟೋ ತೆಗೆಸಿಕೊಳ್ಳುವುದು. ಕುಟುಂಬದ ಪಾತ್ರ ಮನೆಯ ಹಿರಿಯರು ಶಾಸ್ತ್ರಗಳನ್ನು ಮುನ್ನಡೆಸುತ್ತಿದ್ದರು.

ಪ್ರತಿಯೊಂದು ವಿಧಿಗೂ ಒಂದು ಅರ್ಥವಿರುತ್ತಿತ್ತು. ಈವೆಂಟ್ ಮ್ಯಾನೇಜರ್‌ಗಳ ಹಾವಳಿ ಹೆಚ್ಚು. ಶಾಸ್ತ್ರಗಳಿಗಿಂತ ಎಂಟರ್‌ಟೈನ್ಮೆಂಟ್‌ಗೆ ಇಲ್ಲಿ ಹೆಚ್ಚಿನ ಆದ್ಯತೆ. ಊಟೋಪಚಾರ ಬಾಳೆ ಎಲೆಯಲ್ಲಿ ಬಡಿಸುವ ಸಾತ್ವಿಕ ಆಹಾರ ಮತ್ತು ಪ್ರೀತಿಯಿಂದ ಬಡಿಸುವ ಅತಿಥ್ಯವಿತ್ತು. ಬಫೆ ಸಿಸ್ಟಮ್‌ನ ಗಡಿಬಿಡಿ ಮತ್ತು ಆಹಾರದ ಪೋಲು ಹೆಚ್ಚು. ಮನುಷ್ಯ ಸಂಬಂಧಗಳಿಗಿಂತ ಮೆನು ಕಾರ್ಡ್ ದೊಡ್ಡದಾಗಿರುತ್ತದೆ.



## ಕಾಗೆಗಳ ದ್ವೇಷ, 20 ವರುಷ!

ಕಾಗೆಯೊಂದು ಕಿರಿಕಿರಿ ಮಾಡಿದಾಗ ಅದನ್ನು ರೋಷದಿಂದ ಓಡಿಸಿದ್ದೀರಾ? ಅದರಿಂದೇನು ತೊಂದರೆಯಾಗದೆಂದು ನೀವು ಭಾವಿಸಿರಬಹುದು. ಆದರೆ ಅಧ್ಯಯನದ ಅನುಸಾರ ಅದು ಭಾರೀ ಅಪಾಯದ ಕೆಲಸ!

ಹಾಗೆ ಮಾಡಿದ್ದಾದರೆ, ದುಷ್ಟ ವೈರಿಯೊಬ್ಬ ನಿಮಗೆ ಗಂಟು ಬಿದ್ದಿರಬಹುದು. ಯಾಕೆಂದರೆ ವಾಷಿಂಗ್ಟನ್ ವಿಶ್ವವಿದ್ಯಾಲಯದ ಅನುಸಾರ ಕಾಗೆಗಳು ಸುಮಾರು ಎರಡು ದಶಕಗಳ ಕಾಲ ದ್ವೇಷ ಸಾಧಿಸುತ್ತವೆ! ಆದ್ದರಿಂದ ಆ ಕಾಗೆ ಪ್ರತೀ ಸಲ ನೀವು ಮುಖಾಮುಖಿಯಾದಾಗಲೂ ತನ್ನ ಗುಂಪಿನ ಇತರ ಕಾಗೆಗಳೊಂದಿಗೆ ಸೇರಿಕೊಂಡು ಆಕ್ರಮಣಕಾರಿಯಾಗಿ ಕೂಗಿದರೆ ಅಚ್ಚರಿ ಪಡಬೇಡಿ. ಗಮನಿಸಿ: ಆ ಕಾಗೆಯ ಗುಂಪಿನ ಇತರ ಕಾಗೆಗಳೂ ನಿಮ್ಮನ್ನು ಹಾಗೆಯೇ ದ್ವೇಷಿಸುತ್ತವೆ.

ಹಲವು ದೇಶಗಳ ಜಾನಪದ ಕತೆಗಳ ಅನುಸಾರ ಹಕ್ಕಿಗಳಿಗೂ ಬುದ್ಧಿವಂತಿಕೆಯಿದೆ. ಆದರೆ ಈ ಸಂಗತಿಯನ್ನು ಖಚಿತ ಪಡಿಸುವ ಯಾವುದೇ ಅಧ್ಯಯನ ನಡೆದಿರಲಿಲ್ಲ. ಕೊನೆಗೆ ವಾಷಿಂಗ್ಟನ್ ವಿಶ್ವವಿದ್ಯಾಲಯದ ಸಂಶೋಧಕರು ಈ ಬಗ್ಗೆ ದಶಕಗಳ ಅವಧಿಯ ಅಧ್ಯಯನ ಜರಗಿಸಲು ನಿರ್ಧರಿಸಿದರು. ಇದೆಲ್ಲ ಶುರುವಾದದ್ದು 2005ರಲ್ಲಿ ವನ್ಯಜೀವಿ ಜೀವಶಾಸ್ತ್ರಜ್ಞ ಡಾ. ಜಾನ್ ಮಾರ್ಜು-ಲುಫ್ ಮುಂದಾಳುವಾಗಿದ್ದ ಸಂಶೋಧಕರ ತಂಡವು ಅಧ್ಯಯನ ಆರಂಭಿಸಿದಾಗ. ತಮಗೆ ತೊಂದರೆ ಮಾಡಿದವರ ಮುಖಗಳನ್ನು ಕಾಗೆಗಳು ನೆನಪಿಟ್ಟು ಕೊಳ್ಳುತ್ತವೆಯೇ? ಹೌದೆಂದಾದರೆ, ಎಷ್ಟು ಸಮಯ ನೆನಪಿಟ್ಟು ಕೊಳ್ಳುತ್ತವೆ? ಎಂಬುದನ್ನು ಪರೀಕ್ಷಿಸುವುದು ಆ ಅಧ್ಯಯನದ ಉದ್ದೇಶ.

ಆ ಸಂಶೋಧನಾ ತಂಡದ ಕೆಲವರಿಗೆ ಕೆಲವು ಕಾಗೆಗಳನ್ನು ಹಿಡಿದು ಅವಕ್ಕೆ ಬ್ಯಾಂಡ್ (ಪಟ್ಟಿ) ಹಾಕುವ ಕೆಲಸ ನೀಡಲಾಯಿತು. ಇದರಲ್ಲಿ ಮುಖ್ಯ ಸಂಗತಿ ಏನೆಂದರೆ, ಅವರು ಅಪಾಯ ಸೂಚಿಸುವ ನಿರ್ದಿಷ್ಟ ವಿನ್ಯಾಸದ ಮುಖವಾಡ ಧರಿಸಿ ಆ ಕೆಲಸ ಮಾಡುತ್ತಿದ್ದರು - ಕಾಗೆಗಳಿಗೆ ಅವರ ಮುಖ ನೆನಪಿಡಲು ಸಹಾಯವಾಗಲಿ ಎಂಬುದು ಇದಕ್ಕೆ ಕಾರಣ. ಆ ತಂಡದ ಇತರ ಸದಸ್ಯರು ಸಾಮಾನ್ಯ ಮುಖವಾಡಗಳನ್ನು ಧರಿಸುತ್ತಿದ್ದರು ಮತ್ತು ಕಾಗೆಗಳ ತಂಟೆಗೆ ಹೋಗುತ್ತಿರಲಿಲ್ಲ.

ಆನಂತರ, ಕಾಗೆಗಳ ಪ್ರತಿಕ್ರಿಯೆ ಏನೆಂದು ತಿಳಿಯಲಿಕ್ಕಾಗಿ ಸಂಶೋಧಕರು ತಮ್ಮತಮ್ಮ ಮುಖವಾಡಗಳನ್ನು ಧರಿಸಿ, ತಾವಿದ್ದ ಕಟ್ಟಡಗಳಿಂದ ಹೊರಗೆ ಬರುತ್ತಿದ್ದರು. ಕಾಗೆಗಳ ಪ್ರತಿಕ್ರಿಯೆ ಸ್ಪಷ್ಟವಾಗಿತ್ತು. ಅವು ಆಕ್ರಮಣಕಾರಿಯಾಗಿ ಕಾಕಾ ಎಂದು ಕೂಗುತ್ತಿದ್ದವು ಹಾಗೂ ಜೋರಾಗಿ ಕಿರಿಚಾಡುತ್ತಿದ್ದವು, ನಿರ್ದಿಷ್ಟ ಮುಖವಾಡ ಧರಿಸಿದವರ ತಲೆಗಳಿಗೆ ಕೆಲವೇ ಅಡಿಗಳ ಅಂತರಕ್ಕೆ ಆಕಾಶದಿಂದ ಧುಮುಕುತ್ತಿದ್ದವು, ಅದು ತಮ್ಮ ಜಾಗವೆಂದು ತೋರಿಸಲಿಕ್ಕಾಗಿ ಮೈಮೇಲೆ ಎರಗುತ್ತಿದ್ದವು. ಮಾತ್ರವಲ್ಲ, ಆ ಮುಖವಾಡ ಧರಿಸಿದವರನ್ನು ಕ್ಯಾಂಪಸ್ಸಿನ ಉದ್ದಗಲದಲ್ಲಿ ಬೆನ್ನಟ್ಟುತ್ತಿದ್ದವು. ಆದರೆ, ಸಾಮಾನ್ಯ ಮುಖವಾಡ ಧರಿಸಿದವರು ಬಂದಾಗ ಇಂತಹ ಯಾವುದೇ ವರ್ತನೆಗಳನ್ನು ಕಾಗೆಗಳು ಪ್ರದರ್ಶಿಸುತ್ತಿರಲಿಲ್ಲ.

ಆಸಕ್ತಿದಾಯಕ ಸಂಗತಿಯೆಂದರೆ, ಸ್ವಲ್ಪ ಸಮಯದ ನಂತರ, ಸಂಶೋಧಕರು ಹಿಡಿದು, ಬ್ಯಾಂಡ್ ಹಾಕದ ಕಾಗೆಗಳೂ ಇಂತಹ ಆಕ್ರಮಣಕಾರಿ ವರ್ತನೆ ಪ್ರದರ್ಶಿಸಿದವು. ಕಾಗೆಗಳ ಈ ವರ್ತನೆ ಹಲವು ವರುಷಗಳ ತನಕ ಮುಂದುವರಿಯಿತು. ಇದಕ್ಕೆ ಒಂದೇ ಒಂದು ತಾರ್ಕಿಕ ವಿವರಣೆ ಹೀಗಿದೆ: ಕಾಗೆಗಳು ತಮ್ಮ ಸಮುದಾಯದ ಇತರ ಎಲ್ಲ ಕಾಗೆಗಳಿಗೂ ತಮ್ಮ ಜ್ಞಾನ ಮತ್ತು ದ್ವೇಷವನ್ನು ದಾಟಿಸಬಲ್ಲವು.

ಈ ಅಧ್ಯಯನ 17 ವರುಷಗಳ ತನಕ ಮುಂದುವರಿಯಿತು. ಆ ಎಲ್ಲ ವರುಷಗಳಲ್ಲಿಯೂ ಕಾಗೆಗಳು ನಿರ್ದಿಷ್ಟ ಮುಖವಾಡ ಧರಿಸಿದವರ ಬಗ್ಗೆ ವೈರತ್ವ ಮುಂದುವರಿಸಿದವು ಮತ್ತು ಅವರಿಗೆ ಕಾಟ ಕೊಟ್ಟವು.

ಒಂದು ಸಮುದಾಯದ ಕಾಗೆಗಳ ನಡುವಣ ಸಂವಹನ ಕೇವಲ ತಮಗೆ ಅಪಾಯ ಮಾಡಬಹುದಾದದ್ದರ ಬಗ್ಗೆ ಸೀಮಿತವಾಗಿಲ್ಲ. ಅವು ಆಹಾರದ ಸಹಿತ ಇತರ ಸಂಗತಿಗಳ ಬಗ್ಗೆಯೂ ಸಂವಹನ ನಡೆಸುತ್ತವೆ.


ಈ ಬುದ್ಧಿವಂತ ಪಕ್ಷಿಗಳಿಂ ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುತ್ತವೆ. ಉದಾಹರಣೆಗೆ ಯಾವುದೇ ಕಾಗೆಯು ಇನ್ನೊಂದು ಕಾಗೆಯ ದೈಹಿಕ ಭಾಷೆ (ಬಾಡಿ ಲ್ಯಾಂಗ್ವೇಜ್)ಯನ್ನು ಅನುಕರಿಸಬಲ್ಲದು. ಕಾಗೆಗಳು ಒಟ್ಟಾಗಿ ಕುಟುಂಬಗಳಲ್ಲಿ ವಾಸಿಸುತ್ತವೆ. ಮನುಷ್ಯರು ಸತ್ತವರ ಅಂತ್ಯಸಂಸ್ಕಾರ ಮಾಡುವಂತೆ, ಒಂದು ಕಾಗೆ ಸತ್ತರೆ ಆ ಕುಟುಂಬದ ಇತರ ಕಾಗೆಗಳೆಲ್ಲ ಒಟ್ಟು ಸೇರಿ, ಮೌನವಾಗಿ ತಮ್ಮ ಜೊತೆಗಾರನಿಗೆ ಅಂತಿಮ ನಮನ ಸಲ್ಲಿಸುತ್ತವೆ.

ಕಾಗೆಗಳು ಮಾತ್ರ ಅಪಾಯಕಾರಿ ವ್ಯಕ್ತಿಗಳ ವಿರುದ್ಧ ಆಕ್ರಮಣಕಾರಿ ವರ್ತನೆ ಪ್ರದರ್ಶಿಸುವ ಹಕ್ಕಿಗಳಲ್ಲ. ಆಸ್ಟ್ರೇಲಿಯನ್ ಮ್ಯಾಗ್-ಪೈ, ನಾರ್ದನ್ ಮೋಕಿಂಗ್ ಹಕ್ಕಿಗಳು, ಕೆನಡಾ ಗೀಸ್, ಸೀಗಲ್, ರೆಡ್ ವಿಂಗ್ಡ್ ಬ್ಲಾಕ್ ಹಕ್ಕಿಗಳು, ಜೇ - ಈ ಹಕ್ಕಿಗಳೂ ತಮ್ಮ ಉಳಿವಿಗಾಗಿ ಇಂತಹದೇ ಕಾರ್ಯತಂತ್ರಗಳನ್ನು ಬಳಸುತ್ತವೆ.

ಈ ಆಕ್ರಮಣಕಾರಿ ಕಾರ್ಯತಂತ್ರಗಳನ್ನು ಮೊಬ್ಬಿಂಗ್ ಎಂದು ಕರೆಯಲಾಗುತ್ತದೆ. ಇದರಲ್ಲಿ ಹಕ್ಕಿಗಳ ಇಡೀ ಗುಂಪು ಜೋರಾಗಿ ಕೂಗುವುದು, ಆಕಾಶದಿಂದ ಧುಮುಕುವುದು, ಶತ್ರುವಿನ ಮೇಲೆ ಎರಗುವುದು, ಹೆದರಿಸುವುದು ಇವನ್ನೆಲ್ಲ ಮಾಡುತ್ತದೆ. ಇವೆಲ್ಲದರ ಉದ್ದೇಶ ಶತ್ರುವನ್ನು ಬೆದರಿಸುವುದು ಮತ್ತು ಶತ್ರುವಿಗೆ ದಾಳಿ ಮಾಡಲು ಕಷ್ಟವಾಗುವಂತೆ ಮಾಡುವುದು.

ಅದೇನಿದ್ದರೂ ಈ ದ್ವೇಷ ಸಾಧಿಸುವ ವರ್ತನೆ ಪ್ರದರ್ಶಿಸುವ ಹಕ್ಕಿಗಳ ಸಂಖ್ಯೆ ಬಹಳ ಸಣ್ಣದು. ಕೊನೆಯದಾಗಿ, ನೀವು ಯಾವುದೇ ಕಾಗೆಗೆ ಕಿರುಕುಳ ನೀಡಿದರೆ, ಅದರ ಗುಂಪಿನ ಎಲ್ಲ ಕಾಗೆಗಳ ಸತಾಯಿಸುವಿಕೆಯನ್ನು ಹಲವಾರು ವರುಷಗಳವರೆಗೆ ಎದುರಿಸಲು ಸಿದ್ಧರಾಗಿ!

– **ಅಡ್ಡೂರು** ಕೃಷ್ಣರಾವ್



# ಸ್ಪರ್ಧಾತ್ಮಕಪರೀಕ್ಷಾರ್ಥಿಗಳಿಗಾಗಿಸ್ಪರ್ಧಾಕುಟೀರಪ್ರಾರಂಭಿಸಿ

## ಗ್ರಂಥಾಲಯ ವ್ಯವಸ್ಥೆ ಅಚ್ಚುಕಟ್ಟಾಗಿರಲಿ | ಜಿಲ್ಲಾಧಿಕಾರಿ ಲತಾಕುಮಾರಿ ಸೂಚನೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಯುವಕರ ಅಧ್ಯಯನಕ್ಕೆ ನೆರವಾಗುವ ನಿಟ್ಟಿನಲ್ಲಿ ಜಿಲ್ಲಾ ಕೇಂದ್ರ ಗ್ರಂಥಾಲಯದ ಅಧೀನದಲ್ಲಿರುವ ತಾಂತ್ರಿಕ ವಿಭಾಗದ ಕೊಠಡಿಯಲ್ಲಿ ಸ್ಪರ್ಧಾತ್ಮಕ ಅಧ್ಯಯನ ಕೇಂದ್ರ, 'ಹಾಸನ ಸ್ಪರ್ಧಾ ಕುಟೀರ' ಪ್ರಾರಂಭಿಸಬೇಕೆಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಗ್ರಂಥಾಲಯದಲ್ಲಿ ಓದುಗರಿಗೆ ಮೂಲ ಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು. ಜಿಲ್ಲಾ ಗ್ರಂಥಾಲಯ ಅಧೀನದಲ್ಲಿರುವ ವಾಹನಗಳನ್ನು ನಿಲ್ಲಿಸಲು ನಿರ್ಮಿಸಿ ರುವ ಶೆಡ್‌ನಲ್ಲಿ ಪರಾಮರ್ಶನ ವಿಭಾಗದ ಓದುಗರಿಗೆ ಸ್ಥಳಾವಕಾಶ ವಿಸ್ತರಿಸಬೇಕೆಂದರು.

ಹಾಸನ ಸ್ಪರ್ಧಾ ಕುಟೀರ ಕೋಚಿಂಗ್ ಸೆಂಟರ್‌ನಲ್ಲಿ ಸೀಟಿಂಗ್ ಆರೆಂಜ್ ಮೆಂಟ್ ಹಾಗು ಡಿಜಿಟಲ್ ಬೋರ್ಡ್ ಅಳವಡಿಸಿ ಯಾವುದೇ ಇಲಾಖೆಯ ನೋಟಿಫಿಕೇಶನ್ ಆದರೆ ಮಾಹಿತಿ ಯನ್ನು ಪ್ರಕಟಿಸಿ ಮಕ್ಕಳಿಗೆ ಲಭ್ಯವಾಗುವಂತೆ ನೋಡಿಕೊಳ್ಳಿ ಎಂದು ತಿಳಿಸಿದರು.

ಸ್ಪರ್ಧಾತ್ಮಕ ಪರೀಕ್ಷೆ ಅಧ್ಯಯನ ಮಾಡಲು ಬರುವ ಮಕ್ಕಳ ನೋಂದಣಿ ಮಾಡಿಸಬೇಕು. ಮಕ್ಕಳ ಬಳಕೆಗೆ ನೆರವಾಗುವಂತೆ ಕಲಾಭವನದ ಮೂರನೇ ಮಹಡಿಯಲ್ಲಿರುವ ಗ್ರಂಥಾಲಯವನ್ನು ಕೆಳಭಾಗಕ್ಕೆ ಸ್ಥಳಾಂತರ ಮಾಡಿ ಗ್ರಂಥಾಲಯ ಮತ್ತು ಕಲಾಭವನಕ್ಕೆ ಸಂಪರ್ಕ ಕಲ್ಪಿಸಲು ಒಂದು ಗೇಟ್ ಅಳವಡಿಸಲು ಕ್ರಮ ಕೈಗೊಳ್ಳಬೇಕು. ಕಲಾಕ್ಷೇತ್ರದ ಹೊರಭಾಗದಲ್ಲಿ ಮೈಕ್ ಬಳಕೆಯನ್ನು ನಿಷೇಧಿಸುವಂತೆ ಸೂಚನೆ ನೀಡಿದರು.



ಓದುವ ಮಕ್ಕಳಿಗೆ ಅನುಕೂಲವಾಗುವಂತೆ ಗ್ರಂಥಾಲಯದ ಬಳಿ ಇಂದಿರಾ ಕ್ಯಾಂಟೀನ್ ಆರಂಭಿಸಬೇಕು. ಓದುಗರಿಗೆ ತೊಂದರೆ ಆಗದಂತೆ ನಿಶಬ್ದತೆ ಕಾಪಾಡಬೇಕು. ಈ ನಿಟ್ಟಿನಲ್ಲಿ ಬೇರೆಯವರು ಅನಾವಶ್ಯಕವಾಗಿ ಬಂದು ಕುಳಿತು ನಿದ್ದೆ ಮಾಡುವುದು ಅಥವಾ ಕಾಲಹರಣ ಮಾಡುವ ಕೆಲಸಗಳಾಗಬಾರದು. ಉಚಿತ ವೈಫೈ ಮತ್ತು ಇಂಟರ್‌ನೆಟ್ ವ್ಯವಸ್ಥೆ ಕಲ್ಪಿಸಲು ತಿಳಿಸಿದರು.

ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಪರಾಮರ್ಶನ ವಿಭಾಗದಲ್ಲಿ ಓದುಗರು ಕುಳಿತುಕೊಳ್ಳಲು ಅಗತ್ಯ ಪಿಠೋಪಕರಣಗಳಿಗೆ ಕ್ರಿಯಾ ಯೋಜನೆ ತಯಾರಿಸಿ ಜೊತೆಗೆ ನಗರ ಗ್ರಂಥಾಲಯದ ಹಳೆಯ ಕಟ್ಟಡದಲ್ಲಿರುವ ದಿನಪತ್ರಿಕೆ ವಿಭಾಗವನ್ನು ಕೆಲವು ಪರಿವರ್ತನೆಗಾಗಿ ಯೋಜನೆ ತಯಾರಿಸಿ ಎಂದು ತಿಳಿಸಿದರು.

**ಬೀದಿ ಬದಿ ಅಂಗಡಿ ತೆರವುಗೊಳಿಸಿ**

ಗ್ರಂಥಾಲಯದ ಆವರಣದಲ್ಲಿ ಗಿಡಗಳನ್ನು ನೆಡುವುದು, ಸ್ವಚ್ಛತೆಗೆ ಆದ್ಯತೆ ನೀಡಬೇಕು. ವಾಹನ ಪಾರ್ಕಿಂಗ್ ವ್ಯವಸ್ಥೆ ಚೆನ್ನಾಗಿರಬೇಕು. ನಿರ್ವಹಣೆಗೆ ಕಾವಲುಗಾರನ ನಿಯೋಜಿಸಬೇಕು. ವಾಹನಗಳ ಪಾರ್ಕಿಂಗ್ ಶೆಡ್‌ನಲ್ಲಿರುವ ಹಳೆಯ ವಾಹನಗಳನ್ನು ನಿಯಮಾನುಸಾರ ವಿಲೇವಾರಿ ಮಾಡಿ ಸ್ಥಳವನ್ನು ಸದ್ಬಳಕೆ ಮಾಡಿಕೊಳ್ಳಲು ಸೂಚನೆ ನೀಡಿದರು.

ಗ್ರಂಥಾಲಯದ ಮುಂಭಾಗದಲ್ಲಿರುವ ಹೂವಿನ ಹಾಗು ಹಣ್ಣಿನ ಅಂಗಡಿಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕು. ಗ್ರಂಥಾಲಯಕ್ಕೆ ಬರುವ ಓದುಗರಿಗೆ ತೊಂದರೆ ಆಗದಂತೆ ದುರ್ವಾಸನೆ ಬರದಂತೆ ಯು.ಜಿ.ಡಿ. ವ್ಯವಸ್ಥೆಯನ್ನು ಸರಿಯಾಗಿ ನಿರ್ವಹಣೆಗೆ ನಿಗಾ ವಹಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಲ್ಲಾ ಕೇಂದ್ರ ಗ್ರಂಥಾಲಯದ ಉಪ ನಿರ್ದೇಶಕಿ ಹಸೀನಾ ತಾಜ್, ನಗರ ಕೇಂದ್ರ ಗ್ರಂಥಾಲಯದ ಉಪ ನಿರ್ದೇಶಕಿ ನಳಿನಿ, ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ರಾಮಕೃಷ್ಣ, ತಹಶೀಲ್ದಾರ್ ಗೀತಾ ಇತರರಿದ್ದರು.

### ಪ್ರತ್ಯೇಕ ಶೌಚಾಲಯಕ್ಕೆ ಸೂಚನೆ

ಹೊಸ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಲು ಎಷ್ಟು ಹಣ ಬೇಕು ಎಂಬುದರ ಮಾಹಿತಿಯನ್ನು ನಿರ್ಮಿತಿ ಕೇಂದ್ರದವರು ಶೀಘ್ರ ನೀಡಬೇಕು. ಹೆಣ್ಣು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ನಿರ್ಮಾಣಕ್ಕೆ ಗ್ರಂಥಾಲಯ ಆವರಣದ ಕಾಂಪೌಂಡ್ ಅನ್ನು ಕಡಿಮೆ ವೆಚ್ಚದಲ್ಲಿ ಎತ್ತರಿಸಲು ಕ್ರಿಯಾ ಯೋಜನೆ ತಯಾರಿಸಬೇಕೆಂದರು.

# ಖಾಸಗಿ ಆಸ್ಪತ್ರೆಗಳಲ್ಲಿ ದರ ಪಟ್ಟಿ ಪ್ರದರ್ಶನ ಕಡ್ಡಾಯ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿರುವ ಖಾಸಗಿ ಆಸ್ಪತ್ರೆಗಳಲ್ಲಿ ಕಡ್ಡಾಯವಾಗಿ ದರ ಪಟ್ಟಿಗಳನ್ನು ಸೂಚನಾ ಫಲಕದಲ್ಲಿ ಅಳವಡಿಸಬೇಕು. ಈ ನಿಟ್ಟಿನಲ್ಲಿ ಪರಿಶೀಲನೆ ಮಾಡಿ ಒಂದು ತಿಂಗಳ ಒಳಗೆ ವರದಿ ಸಲ್ಲಿಸಬೇಕೆಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಹೇಳಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಕೆಪಿಎಂಇ (ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆ) ಸಭೆಯಲ್ಲಿ ಮಾತನಾಡಿದ ಅವರು, ಆಸ್ಪತ್ರೆಗೆ ಬರುವ ರೋಗಿಗಳಿಗೆ ಕಾಣುವ ರೀತಿಯಲ್ಲಿ ದರ ಪಟ್ಟಿಯನ್ನು ಹಾಕಬೇಕು. ಜೊತೆಗೆ ಕನ್ನಡ ಭಾಷೆಯಲ್ಲಿ ಹಾಕಬೇಕು. ಆರೋಗ್ಯ ವಿಮೆ, ಉಚಿತ ಆರೋಗ್ಯ ಸೇವೆ, ರಿಯಾಯಿತಿ ಮತ್ತು ವೈದ್ಯಕೀಯ ಬಿಲ್ ಮರು ಪಾವತಿ ಕುರಿತ ಮಾಹಿತಿ ಕೂಡ ಫಲಕದಲ್ಲಿ ಅಳವಡಿಸಬೇಕು. ಜೊತೆಗೆ ಆರೋಗ್ಯ ಸೇವೆಗಳ ನ್ಯೂನ್ಯತೆಗಳ ಬಗ್ಗೆ ಸಾರ್ವಜನಿಕರು ದೂರು ಸಲ್ಲಿಸಲು ದೂರವಾಣಿ ಸಂಖ್ಯೆ ಅಳವಡಿಸಬೇಕೆಂದರು.



ಸಾರ್ವಜನಿಕರೊಂದಿಗೆ ಸ್ಪಂದಿಸಿ ಉತ್ತಮ ಆರೋಗ್ಯ ಸೇವೆಗಳನ್ನು ಒದಗಿಸುವುದರ ಜೊತೆಗೆ ಸೌಜನ್ಯದಿಂದ ನಡೆದುಕೊಳ್ಳಬೇಕು. ಖಾಸಗಿ ಆಸ್ಪತ್ರೆಗಳಿಗೆ ಕೆಪಿಎಂಇ ನಿಯಾಮಾವಳಿ ಬಗ್ಗೆ ಮತ್ತಿತರ ವಿಷಯಗಳ ಕುರಿತು ತಿಳವಳಿಕೆ ನೀಡಲು ಕಾರ್ಯಾಗಾರ ಏರ್ಪಡಿಸುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗೆ ಸೂಚನೆ ನೀಡಿದರು.

ಹೃದಯಕ್ಕೆ ಸಂಬಂಧಿಸಿದ ರೋಗಗಳಿಗೆ ಜಿಲ್ಲೆಯಲ್ಲಿ ಯಾವ ಆಸ್ಪತ್ರೆಗಳಲ್ಲಿ ಚಿಕಿತ್ಸೆ ದೊರೆ ಯುತ್ತದೆ ಎಂಬುದರ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡುವ ನಿಟ್ಟಿನಲ್ಲಿ ಆಸ್ಪತ್ರೆಗಳ ಪಟ್ಟಿಯನ್ನು ಸೂಚನಾ ಫಲಕದಲ್ಲಿ ಅಳವಡಿಸಬೇಕು. ಸಾರ್ವಜನಿಕರಿಂದ ಪ್ರತಿ ತಿಂಗಳು ಖಾಸಗಿ ಆಸ್ಪತ್ರೆಗಳ ಬಗ್ಗೆ ಬಂದಿರುವ ದೂರುಗಳನ್ನು ಪಟ್ಟಿ ಮಾಡಿ ಪ್ರತಿ ತಿಂಗಳು ಸಭೆ ನಡೆಸಲು ಕ್ರಮಕೈಗೊಳ್ಳುವಂತೆ ಸೂಚನೆ ನೀಡಿದರು. ಅಪಘಾತಗಳು ಸಂಭವಿಸಿದ ಸಂದರ್ಭದಲ್ಲಿ ಜೀವ ರಕ್ಷಣೆಗೆ ಇರುವ ಗೋಲ್ಡನ್ ಅವರ್‌ನಲ್ಲಿ ಆಸ್ಪತ್ರೆಗೆ ಗಾಯಾಳುಗಳನ್ನು ಕರೆತಂದು ಚಿಕಿತ್ಸೆ ದೊರಕಿಸಲು ನೆರವಾಗಬೇಕೆಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ|| ಅನಿಲ್, ಪ್ರಸೂತಿ ತಜ್ಞರಾದ ಡಾ|| ಭಾರತಿ ರಾಜಶೇಖರ್ ಇತರರಿದ್ದರು.

# ನಾಳೆ ಔಷಧ ವ್ಯಾಪಾರಿಗಳ ರಾಷ್ಟ್ರವ್ಯಾಪಿ ಬಂದ್

• ಪ್ರಜೋದಯ ವರದಿ

**ಹಾಸನ:** ಅನಧಿಕೃತ ಆನ್‌ಲೈನ್ ಔಷಧ ವ್ಯಾಪಾರ ಮತ್ತು ಅದರ ಅಸಹಜ ರಿಯಾಯಿತಿ ಗಳನ್ನು ವಿರೋಧಿಸಿ ಮೇ 20ರಂದು ಬುಧವಾರ ನಡೆಯಲಿರುವ ರಾಷ್ಟ್ರವ್ಯಾಪಿ ಬಂದ್ ಕರೆಗೆ ನೈತಿಕ ಬೆಂಬಲ ಸೂಚಿಸುವುದರ ಜೊತೆಗೆ ಪ್ರತಿಭಟನೆಯಲ್ಲಿ ಕಪ್ಪು ಪಟ್ಟಿ ಧರಿಸಿ ಭಾಗವಹಿ ಸುವುದಾಗಿ ಜಿಲ್ಲಾ ಔಷಧ ವ್ಯಾಪಾರಿಗಳ ಸಂಘ ತಿಳಿಸಿದೆ.

ಪ್ರತಿಭಟನೆ ಹಿನ್ನಲೆಯಲ್ಲಿ ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಔಷಧ ಅಂಗಡಿ ಗಳನ್ನು ಮುಚ್ಚದೆ ಎಂದಿನಂತೆ ಕಾರ್ಯ ನಿರ್ವಹಿಸಿ ರೋಗಿಗಳು ಹಾಗು ಸಾರ್ವಜನಿಕರಿಗೆ ತೊಂದರೆಯಾಗದಂತೆ ಸೇವೆ ನೀಡುವುದಾಗಿ ಜಿಲ್ಲಾ ಸಂಘದ ಪದಾಧಿಕಾರಿಗಳು ತಿಳಿಸಿದ್ದಾರೆ.

# ದೊಡ್ಡಗರಡಿ ರಸ್ತೆ, ಚರಂಡಿ ಕಾಮಗಾರಿಗೆ ಚಾಲನೆ



• ಪ್ರಜೋದಯ ವರದಿ

**ಹಾಸನ:** ನಗರದಲ್ಲಿ ಬಹುದಿನಗಳ ಬೇಡಿಕೆಯಾಗಿದ್ದ ದೊಡ್ಡಗರಡಿ ರಸ್ತೆ ಹಾಗು ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಹೆಚ್.ಪಿ.ಸ್ವರೂಪ್ ಅವರು ಭೂಮಿಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಅವರು, ಸಿಎಂಐಡಿಪಿ ಅನುದಾನದಲ್ಲಿ 88 ಲಕ್ಷ ರೂ. ಹಾಗು ಮಹಾನಗರಪಾಲಿಕೆ 17.25 ಲಕ್ಷ ರೂ. ಅನುದಾನವನ್ನು ಬಳಸಿಕೊಂಡು ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಅಧಿಕಾರಿಗಳು ಹಾಗು ಗುತ್ತಿಗೆದಾರರಿಗೆ ಗುಣಮಟ್ಟದ ಕಾಮಗಾರಿ ನಡೆಸಿ ಶೀಘ್ರದಲ್ಲಿ ಕಾಮಗಾರಿ ಪೂರ್ಣಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವಂತೆ ಸೂಚಿಸಿದರು. ಈ ಸಂದರ್ಭದಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರು, ಸ್ಥಳೀಯರು ಉಪಸ್ಥಿತರಿದ್ದರು.

# ಗೌಡರ ಜನ್ಮ ದಿನ: ಸರ್ಕಾರಿ ಆಸ್ಪತ್ರೆಗೆ ಟಿವಿ ಕೊಡುಗೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ 94ನೇ ಹುಟ್ಟು ಹಬ್ಬದ ಅಂಗವಾಗಿ ಶಾಸಕ ಸಿ.ಎನ್.ಬಾಲಕೃಷ್ಣ ಅವರ ನೇತೃತ್ವದಲ್ಲಿ ಸೋಮವಾರ ಪಟ್ಟಣದ ಆಂಜನೇ ಯಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಸಾರ್ವಜನಿಕರಿಗೆ ಸಿಹಿ ಹಂಚಲಾಯಿತು.

ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳ ಮನರಂಜನೆಗಾಗಿ ಟಿವಿಯನ್ನು ಕೊಡುಗೆಯಾಗಿ ನೀಡಲಾಯಿತು. ರೋಗಿಗಳಿಗೆ ಹಣ್ಣು ಮತ್ತು ಬ್ರೆಡ್ ವಿತರಿಸಲಾಯಿತು.

ಶಾಸಕ ಸಿ.ಎನ್.ಬಾಲಕೃಷ್ಣ ಅವರು ಮಾತ ನಾಡಿ, ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಸಾರ್ವಜನಿಕ ಬದುಕು ರಾಜಕಾರಣವನ್ನೂ ಮೀರಿದ ಕ್ಷಮತೆ, ದೂರದರ್ಶಿತ್ವ, ವಿನಮ್ರತೆ, ರೈತ ಪರ ಚಿಂತನೆಯ ಪಯಣವಾಗಿದೆ ಎಂದರು.

ದೇವೇಗೌಡರು ರೈತರ ಬದುಕಿನ ಕಷ್ಟಗಳನ್ನು ಚೆನ್ನಾಗಿ ಅರಿತವರಾಗಿದ್ದರಿಂದ ಬಡ ರೈತರು, ಸೌಲಭ್ಯ ವಂಚಿತರು ಹಾಗು ಸಮಾಜದ ದುರ್ಬಲ ವರ್ಗಗಳ ಒಳಿತಿಗಾಗಿ ಹೋರಾಟಗಾರನಾಗಿ ಗುರುತಿಸಿಕೊಂಡಿದ್ದಾರೆ. ಪ್ರಜಾಸತ್ತಾತ್ಮಕ ವ್ಯವಸ್ಥೆಯ ಕೆಳಸ್ತರದಿಂದ ಆರಂಭಿಸಿದ ಅವರ ಹೋರಾಟದ ಬದುಕು ರಾಜಕೀಯ ರಂಗದಲ್ಲಿ ಗಮನ ಸೆಳೆದಿದೆ ಎಂದರು.



ಅವರು ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ದೇಶದ ಗ್ರಾಮೀಣ ಭಾಗ ಮತ್ತು ಕೃಷಿ ವಲಯಕ್ಕೆ ಬಜೆಟ್‌ನಲ್ಲಿ ಸಿಂಹಪಾಲು ನೀಡಿ ಆರ್ಥಿಕತೆ ಗಟ್ಟಿಗೊಳಿಸಿದರು. ಸಂಸತ್ತಿನಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿಗೆ ಪ್ರಸ್ತಾಪ ಮಾಡಿದ ಮೊದಲ ಪ್ರಧಾನಿ ಎನ್ನುವ ಹಿರಿಮೆ ಅವರದ್ದಾಗಿದೆ. ಕೃಷಿ, ನೀರಾವರಿ ಸೇರಿ ಯಾವುದೇ ವಿಷಯದ ಬಗ್ಗೆ ಅವರು ಮಾತನಾಡುತ್ತಾರೆಂದರೆ ಇಡೀ ದೇಶವೇ ಅದನ್ನು ಕಿವಿಗೊಟ್ಟು ಆಲಿಸುತ್ತದೆಂದರು.

ಅಭಿವೃದ್ಧಿ ಹರಿಕಾರ ಹೆಚ್.ಡಿ.ದೇವೇಗೌಡರು ಮಾಡಿರುವ ಉತ್ತಮ ಕೆಲಸ ಗಳು ಸಾಕಷ್ಟಿವೆ. ಅವರ ಸೇವೆ ದೇಶಕ್ಕೆ ಇನ್ನೂ ಹೆಚ್ಚಿನ ಅವಶ್ಯಕತೆ ಇರುವುದರಿಂದ ಹಾಗು ರೈತರು, ಸಾರ್ವಜನಿಕರಿಗೆ, ನಿರ್ಗತಿಕರ ಪರವಾಗಿ ಇನ್ನೂ ಹಲವು ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಮಾಡಲು ದೇವರು ಅವರಿಗೆ ಆಯಸ್ಸು, ಆರೋಗ್ಯ, ಶಕ್ತಿ ಕೊಡಲಿ. ಇಂತಹ ಮುತ್ಸದ್ದಿಯಾದ ಗೌಡರು ಶತಾಯುಷಿಗಳಾಗಿ ಜಗತ್ತಿನ ಅತ್ಯಂತ ಪರಮೋಚ್ಚ ಪ್ರಜಾಪ್ರಭುತ್ವ ವ್ಯವಸ್ಥೆಯ ದೇವಾಲಯದ ರಾಜ್ಯಸಭೆಯಲ್ಲಿ ತಮ್ಮ ಧ್ವನಿ ಮೊಳಗಿಸುತ್ತಿ ರಲಿ ಎಂಬುದು ಪ್ರತಿಯೊಬ್ಬರ ಆಸೆ ಎಂದರು.

ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಪರಮ ದೇವರಾಜೇಗೌಡ, ಸಹಕಾರ ಮಾರಾಟ ಮಹಾ ಮಂಡಲದ ನಿರ್ದೇಶಕ ಸಿ.ಎನ್.ಪುಟ್ಟಸ್ವಾಮಿಗೌಡ, ಟಿಎಪಿಸಿಎಂಎಸ್ ಅಧ್ಯಕ್ಷ ವೆಂಕಟೇಶ್ ಮೂರ್ತಿ, ನಿರ್ದೇಶಕರಾದ ಎಂ.ಆರ್.ಅನಿಲ್ ಕುಮಾರ್, ಕುಂಬಾರಹಳ್ಳಿ ರಮೇಶ್, ರವಿ, ಉಮೇಶ್, ಪರಮ ಕೃಷ್ಣೇಗೌಡ, ನಂಜುಂಡೇಗೌಡ, ನೆಟ್ಟೇಕೆರೆ ನಾಗರಾಜು, ನವೋದಯ ವಿದ್ಯಾಸಂಸ್ಥೆಯ ಅಧ್ಯಕ್ಷ ಸಿ.ಜೆ.ಮಂಜುನಾಥ್, ಮುಖಂಡರಾದ ಚಿಕ್ಕಬಿಳ್ತಿ ಗಂಗಾಧರ್, ಜಯಣ್ಣ, ಮೋಹನ್ ಕುಮಾರ್, ಅಡಗೂರು ನಾರಾಯಣಿ, ಅಪ್ಸರ್, ಬಾಳೆಮಂಡಿ ಸುರೇಶ್, ರಾಜು, ಕೃಷ್ಣ, ರಾಮು, ಸತ್ಯನಾರಾಯಣ, ಅಪ್ಸರ್, ಡಾ.ಯುವರಾಜ್ ಇತರರಿದ್ದರು.

# ಚಿನ್ನ ಖರೀದಿ ಮುಂದೂಡಿಕೆಗೆ ಕರೆ: ಅಕ್ಕಸಾಲಿಗರಿಗೆ ಸಂಕಷ್ಟ



» ಮೊದಲನೇ ಪುಟದಿಂದ

ಕುಟುಂಬಗಳಿಗೆ ಜೀವನ ನಿರ್ವಹಣೆ ಕಷ್ಟಕರವಾಗಿದೆ.

ಕೊರೊನಾ ಸಮಯದಲ್ಲಿ ಕೆಲಸ ನಿಂತಾಗ ಹೇಗೆ ಸಂಕಷ್ಟದ ಪರಿಸ್ಥಿತಿ ಎದುರಾಗಿತ್ತೋ ಈಗಲೂ ಅದೇ ಪರಿಸ್ಥಿತಿ ಬಂದಿದೆ. ಕೆಲಸ ಇಲ್ಲ, ಆದಾಯ ಇಲ್ಲ, ಮಕ್ಕಳ ಶಾಲಾ ಶುಲ್ಕ ಕಟ್ಟಲು ಸಾಧ್ಯವಾಗುತ್ತಿಲ್ಲ ಎಂದು ಅಕ್ಕಸಾಲಿಗಲು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಿದ್ದಾರೆ.

**ಬೇಡಿಕೆ ಕುಸಿತ ದೊಡ್ಡ ಹೊಡೆತ**

ಚಿನ್ನಾಭರಣ ತಯಾರಿಕೆ ಕೇವಲ ಉದ್ಯೋಗವಲ್ಲ, ಅದು ತಲೆಮಾರುಗಳಿಂದ ಬಂದ ಕರಕುಶಲ ಕಲೆ. ಸೂಕ್ಷ್ಮ ವಿನ್ಯಾಸ, ಕೈಚಳಕ, ಸಹನೆ ಮತ್ತು ಅನುಭವದ ಮೇಲೆ ನಿಂತಿರುವ ಈ ವೃತ್ತಿ ಈಗ ಅಸ್ತಿತ್ವದ ಹೋರಾಟ ಎದುರಿಸುತ್ತಿದೆ. ಜಿಲ್ಲೆಯಲ್ಲಿ ಅನೇಕ ಕುಟುಂಬಗಳು ಸಂಪೂರ್ಣವಾಗಿ ಈ ಉದ್ಯಮದ ಮೇಲೆಯೇ ಅವಲಂಬಿತವಾಗಿವೆ. ದೊಡ್ಡ ಕಂಪನಿಗಳ ಯಾಂತ್ರೀಕೃತ ತಯಾರಿಕೆ ಹೆಚ್ಚುತ್ತಿರುವ ನಡುವೆಯೇ ಸ್ಥಳೀಯ ಕೈಗಾರಿಕಾ ಘಟಕಗಳಿಗೆ ಈಗ ಬೇಡಿಕೆ ಕುಸಿತ ಮತ್ತೊಂದು ದೊಡ್ಡ ಹೊಡೆತವಾಗಿದೆ.

ಭಾರತದಲ್ಲಿ ಚಿನ್ನದ ಆಮದು ಹೆಚ್ಚಿದರೆ ವಿದೇಶಿ ವಿನಿಮಯದ ಮೇಲೆ ಒತ್ತಡ ಉಂಟಾಗುತ್ತದೆ. ಇದೇ ಕಾರಣಕ್ಕೆ ಚಿನ್ನದ ಖರೀದಿಯನ್ನು ತಾತ್ಕಾಲಿಕವಾಗಿ ನಿಯಂತ್ರಿಸುವ ಚರ್ಚೆ ನಡೆಯುತ್ತಿದೆ. ಆದರೆ, ಈ ನಿರ್ಧಾರದ ಹೊರೆ ನೇರವಾಗಿ ಸಣ್ಣ ಕಾರ್ಮಿಕ ವರ್ಗದ ಮೇಲೆ ಬೀಳುತ್ತಿದೆ ಎಂಬ ಆತಂಕವೂ ವ್ಯಕ್ತವಾಗಿದೆ. ದೊಡ್ಡ ಜ್ಯೂವೆಲರಿ ಬ್ರಾಂಡ್‌ಗಳಿಗೆ ಪರ್ಯಾಯ ಆದಾಯ ಮೂಲಗಳಿದ್ದರೂ, ದಿನಗೂಲಿ ಕಾರ್ಮಿಕರಿಗೆ ಬದುಕೇ ಸಂಕಷ್ಟವಾಗಿದೆ.

# ಗೋಹತ್ಯೆ ತಡೆಗೆ ಕಠಿಣ ಕ್ರಮಕ್ಕೆ ಆಗ್ರಹ



• ಪ್ರಜೋದಯ ವರದಿ

**ಹಾಸನ:** ಬಕ್ರೀದ್ ಹಬ್ಬದ ಸಂದರ್ಭದಲ್ಲಿ ರಾಜ್ಯಾದ್ಯಂತ ಅಕ್ರಮ ಗೋ ಸಾಗಾಟ ಹಾಗು ಗೋಹತ್ಯೆ ನಡೆಯದಂತೆ ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ವಿಶ್ವ ಹಿಂದೂ ಪರಿಷತ್ ಹಾಗು ಬಜರಂಗದಳ ಸಂಘಟನೆಯಿಂದ ಜಿಲ್ಲಾಡಳಿತದ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಈ ವೇಳೆ ಜಿಲ್ಲಾ ಗೋ ರಕ್ಷಕ್ ಪ್ರಮುಖ್ ಶಶಿಧರ್ ಅವರು ಮಾತನಾಡಿ, ಅಕ್ರಮ ಕಸಾಯಿ ಖಾನೆಗಳ ಮೇಲೆ ದಾಳಿ ನಡೆಸಬೇಕು. ರಾಜ್ಯದ ಗಡಿಭಾಗಗಳು, ಜಾನುವಾರು ಸಂತೆಯ ಪ್ರದೇಶಗಳು ಹಾಗು ಸಂಶಯಾಸ್ಪದ ವಾಹನಗಳ ಮೇಲೆ ಕಟ್ಟುನಿಟ್ಟಿನ ತಪಾಸಣೆ ನಡೆಸಬೇಕು. ಅಕ್ರಮ ಗೋ ಸಾಗಾಟ ಮತ್ತು ಗೋಹತ್ಯೆ ಪ್ರಕರಣಗಳಲ್ಲಿ ಭಾಗಿಯಾಗಿರುವವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ವಶಪಡಿಸಿಕೊಳ್ಳುವ ಜಾನುವಾರುಗಳನ್ನು ಸರ್ಕಾರಿ ಗೋ ಶಾಲೆಗಳಲ್ಲಿ ಸಂರಕ್ಷಿಸಲು ವ್ಯವಸ್ಥೆ ಮಾಡಬೇಕೆಂದು ಆಗ್ರಹಿಸಿದರು.

ಬಜರಂಗದಳ ಜಿಲ್ಲಾ ವಿದ್ಯಾರ್ಥಿ ಪ್ರಮುಖ್ ಜೀವನ್ ಮಾತನಾಡಿ, ಶಾಲಾ-ಕಾಲೇಜುಗಳಲ್ಲಿ ಹಿಜಾಬ್ ಧರಿಸಲು ಅವಕಾಶ ನೀಡಿರುವ ರಾಜ್ಯ ಸರ್ಕಾರದ ಆದೇಶವನ್ನು ಹಿಂಪಡೆಯಬೇಕು. ಸಮವಸ್ತ್ರ ಸಂಹಿತೆ ಮುಂದುವರಿಯಬೇಕು. ಹಿಜಾಬ್ ಕುರಿತ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಯಲ್ಲಿರುವ ಸಂದರ್ಭದಲ್ಲೇ ಸರ್ಕಾರ ಆದೇಶ ಹೊರಡಿಸಿರುವುದು ಸರಿಯಲ್ಲ ಎಂದು ಹೇಳಿದರು.

ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸುವುದಕ್ಕೂ ಮೊದಲು ನಗರದ ಹಿಂದೂ ಭವನದಲ್ಲಿ ಸಭೆ ನಡೆಸಲಾಯಿತು. ಸಭೆಯಲ್ಲಿ ವಿಶ್ವ ಹಿಂದೂ ಪರಿಷತ್ ಹಾಗು ಬಜರಂಗದಳದ ವಿವಿಧ ಪದಾಧಿ ಕಾರಿಗಳು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

# ಪಶು ವೈದ್ಯಕೀಯ ಕಾಲೇಜಿನಲ್ಲಿ ದಲಿತ ವಿದ್ಯಾರ್ಥಿಗೆ ಕಿರುಕುಳ: ಆರೋಪ

• ಪ್ರಜೋದಯ ವರದಿ

**ಹಾಸನ:** ನಗರದ ಪಶು ವೈದ್ಯಕೀಯ ಕಾಲೇಜಿನ ಎಂ.ವರ್ಧನ್ ಎಂಬ ವಿದ್ಯಾರ್ಥಿಗೆ ಆಂತರಿಕ ಅಂಕಗಳನ್ನು ನೀಡದೆ ದುರುದ್ದೇಶದಿಂದ ಅನುತ್ತೀರ್ಣಗೊಳಿಸಿರುವ ಕಾಲೇಜು ಉತ್ತರ ಪತ್ರಿಕೆಯನ್ನು ನೀಡದೆ ಭವಿಷ್ಯದೊಂದಿಗೆ ಚೆಲ್ಲಾಟವಾಡುತ್ತಿದೆ. ಮತ್ತೊಂದೆಡೆ ರ್‍ಯಾಗಿಂಗ್ ಮೂಲಕ ವಿದ್ಯಾರ್ಥಿಯನ್ನು ಮಾನಸಿಕವಾಗಿ ಕುಗ್ಗಿಸಲಾಗುತ್ತಿದೆ ಎಂದು ದಲಿತ ಮುಖಂಡ ಹೆಚ್.ಕೆ.ಸಂದೇಶ್ ಅವರು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಸತ್ಯಮಂಗಲ ಬಡಾವಣೆಯ ಮೋಹನ್‌ಕುಮಾರ್ ಎಂಬುವವರ ಪುತ್ರ ವರ್ಧನ್ 2023ರಲ್ಲಿ ಎನ್‌ಆರ್‌ಐಎಸ್ ಕೋಟಾದಡಿ 12 ಲಕ್ಷ ರೂ. ಪಾವತಿಸಿ ಪ್ರಥಮ ಬಿವಿಎಸ್/ಎಹೆಚ್ ಕೋರ್ಸ್‌ಗೆ ಪ್ರವೇಶ ಪಡೆದಿದ್ದರು. ಆದರೆ ಪ್ರಥಮ ವರ್ಷದಲ್ಲೇ ವರ್ಧನ್ ಅನುತ್ತೀರ್ಣನಾಗಿದ್ದಾನೆ. ಫಲಿತಾಂಶದ ಕುರಿತು ಸಂಶಯ ಗೊಂಡ ಆತ ಪರಿಶೀಲನೆಗಾಗಿ ಉತ್ತರ ಪತ್ರಿಕೆಗೆ ಅರ್ಜಿ ಸಲ್ಲಿಸಿದರೂ ಪಶು ವೈದ್ಯಕೀಯ ವಿಶ್ವ ವಿದ್ಯಾಲಯದಿಂದ ಈ ವರೆಗೆ ಉತ್ತರ ಪತ್ರಿಕೆ ಸಿಕ್ಕಿಲ್ಲ. ಸೀಟು ಉಳಿಸಿಕೊಳ್ಳುವ ಉದ್ದೇಶದಿಂದ ಮತ್ತೆ 12 ಲಕ್ಷ ರೂ. ಪಾವತಿ ಮಾಡಲಾಗಿದೆ ಎಂದರು.




ಈ ಸಮಸ್ಯೆಯ ನಡುವೆ ಹಿರಿಯ ವಿದ್ಯಾರ್ಥಿಗಳು ರ್‍ಯಾಗಿಂಗ್ ಮೂಲಕ ವರ್ಧನ್ ಅವರನ್ನು ಮಾನಸಿಕವಾಗಿ ಕುಗ್ಗುವಂತೆ ಮಾಡಿದ್ದಾರೆ. ಹಾಸ್ಟೆಲ್‌ನಲ್ಲಿ ಊಟ ವ್ಯರ್ಥ ಮಾಡಬೇಡಿ ಎಂದು ಸಲಹೆ ನೀಡಿದ್ದಕ್ಕೆ ರ್‍ಯಾಗಿಂಗ್ ಮಾಡಲಾಗಿದೆ. ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕಿದ್ದ ಕಾಲೇಜಿನ ಡೀನ್ ಮೌನವಾಗಿದ್ದು ಸಂಶಯಕ್ಕೆ ಎಡೆಮಾಡಿಕೊಟ್ಟಿದೆ ಎಂದರು.

ರ್‍ಯಾಗಿಂಗ್ ಬಗ್ಗೆ ಕಾಲೇಜಿನವರು 6 ಜನರ ತಂಡ ರಚಿಸಿ ತನಿಖೆ ನಡೆಸಿದ ವೇಳೆ, ಆ ಸಮಿತಿಯು ರ್‍ಯಾಗಿಂಗ್ ನಡೆದಿರುವುದು ಸತ್ಯ ಎಂಬ ವರದಿ ನೀಡಿದೆ. ಆದರೆ ತಪ್ಪಿತಸ್ಥರ ವಿರುದ್ಧ ಡೀನ್ ಅವರು ಸಣ್ಣ ಕ್ರಮ ಜರುಗಿಸಿ ಸುಮ್ಮನಾಗಿದ್ದಾರೆ ಎಂದರು.

ಅನ್ಯಾಯದ ಬಗ್ಗೆ ಬೀದರ್‌ನ ಕರ್ನಾಟಕ ಪಶು ವೈದ್ಯಕೀಯ ವಿದ್ಯಾಲಯದ ರಿಜಿಸ್ಟ್ರಾರ್‌ಗೆ ನ್ಯಾಯ ಮತ್ತು ಸಮಗ್ರ ತನಿಖೆಗೆ ಕೋರಿ 2 ಬಾರಿ ಲಿಖಿತ ದೂರು ನೀಡಿದ್ದರೂ ಕೂಡ ಯಾವುದೇ ಕ್ರಮ ಕೈಗೊಂಡಿಲ್ಲ. ಪರಿಣಾಮ ವಿದ್ಯಾರ್ಥಿಯ ಅಮೂಲ್ಯ 2 ವರ್ಷ ಸಮಯ ವ್ಯರ್ಥವಾಗಿದೆ ಎಂದು ದೂರಿದರು. ಇನ್ನಾದರೂ ಸರ್ಕಾರ ಮತ್ತು ಸಂಬಂಧಪಟ್ಟ ಸಚಿವರು ನೊಂದ ವಿದ್ಯಾರ್ಥಿಗೆ ನ್ಯಾಯ ಕೊಡಿಸಬೇಕು. ಎಸ್‌ಸಿ/ಎಸ್‌ಟಿ ವರ್ಗಗಳ ದೌರ್ಜನ್ಯ ವಿರೋಧಿ ಕಾಯ್ದೆ ಅಡಿ ತಪ್ಪಿತಸ್ಥರನ್ನು ಬಂಧಿಸಿ, ಕಠಿಣ ಕ್ರಮ ಜರುಗಿಸಬೇಕು. ಇದೇ ಕಾಲೇಜಲ್ಲಿ ಓದಲು ಅವಕಾಶ ನೀಡಬೇಕು. ಇಲ್ಲದಿದ್ದರೆ ಪ್ರತಿಭಟನೆ ಹಮ್ಮಿಕೊಳ್ಳುವುದಾಗಿ ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಡಿಎಸ್‌ಎಸ್ ಪರಿವರ್ತನಾವಾದ ಸಮಿತಿ ಜಿಲ್ಲಾಧ್ಯಕ್ಷ ಮಂಜು ತೇಜೂರು, ಜಿಲ್ಲಾ ಉಪಾಧ್ಯಕ್ಷ ಹೆಚ್.ಜೆ.ಉಮೇಶ್, ಮುಖಂಡ ರಾದ ಗಣೇಶ್ ವೇಲಾಪುರಿ, ತೋಟೇಶ್ ನಿಟ್ಟೂರು, ರಾಮು ನರಸಿನಕುಪ್ಪೆ ಹಾಜರಿದ್ದರು.

# ಮರು ಮೌಲ್ಯಮಾಪನ: ನವಮಿಗೆ 622 ಅಂಕ



**ಸಕಲೇಶಪುರ:** ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಮರು ಮೌಲ್ಯಮಾಪನ ಫಲಿತಾಂಶದಲ್ಲಿ ರಾಜ್ಯಕ್ಕೆ ನಾಲ್ಕನೇ ಸ್ಥಾನ ಪಡೆದ ಪಟ್ಟಣದ ರೋಟರಿ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿ ಎಸ್.ಎಸ್.ನವಮಿ ಅವರನ್ನು ಶಾಸಕ ಸಿಮೆಂಟ್ ಮಂಜು ಅವರು ಸೋಮವಾರ ಅಭಿನಂದಿಸಿದರು.

ಪತ್ರಕರ್ತ ಎಸ್.ಎಲ್.ಸುಧೀರ್ ಹಾಗು ಶಿಕ್ಷಕಿ ಜಿ.ಎನ್.ಮೇಘ ದಂಪತಿ ಪುತ್ರಿ ನವಮಿ ಏ. 23ರಂದು ಪ್ರಕಟವಾದ ಫಲಿತಾಂಶದಲ್ಲಿ 618 ಅಂಕ ಪಡೆದು ತಾಲ್ಲೂಕಿಗೆ ದ್ವಿತೀಯ ಸ್ಥಾನ ಪಡೆದಿದ್ದರು. ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ್ದ ಹಿನ್ನಲೆ 4 ಹೆಚ್ಚುವರಿ ಅಂಕ ಪಡೆದು 622 ಅಂಕ ಗಳಿಸಿದ್ದಾರೆ. ತಾಲ್ಲೂಕಿಗೆ ಪ್ರಥಮ, ರಾಜ್ಯ ಮತ್ತು ಜಿಲ್ಲೆಗೆ ನಾಲ್ಕನೇ ಸ್ಥಾನ ಪಡೆದು ಗಮನ ಸೆಳೆದಿದ್ದಾರೆ.

ವಿದ್ಯಾರ್ಥಿನಿಯ ಮನೆಗೆ ಭೇಟಿ ನೀಡಿದ ಶಾಸಕ ಸಿಮೆಂಟ್ ಮಂಜು ಅವರು, ನವಮಿಗೆ ಅಭಿನಂದನೆ ಸಲ್ಲಿಸಿ ಮುಂದಿನ ವಿದ್ಯಾಭ್ಯಾಸದಲ್ಲಿಯೂ ಇದೇ ರೀತಿ ಸಾಧನೆ ಮುಂದುವರಿಸಿ ತಾಲ್ಲೂಕಿಗೆ ಕೀರ್ತಿ ತರಬೇಕೆಂದು ಶುಭ ಹಾರೈಸಿದರು.

### ವೈಜ್ಞಾನಿಕ ಕನಿಷ್ಠ ವೇತನ ಜಾರಿಗೆ ಸಿಐಟಿಯು ಒತ್ತಾಯ

# ಕಾರ್ಮಿಕ ವಿರೋಧಿ ನೀತಿ ಖಂಡಿಸಿ ಸಹಿ ಸಂಗ್ರಹ ಚಳುವಳಿ

• ಪ್ರಜೋದಯ ವರದಿ

**ಹಾಸನ:** ವೈಜ್ಞಾನಿಕ ಕನಿಷ್ಠ ವೇತನ ಜಾರಿಗೆ ಒತ್ತಾಯಿಸಿ ಹಾಗು ಕಾರ್ಮಿಕ ವಿರೋಧಿ ನೀತಿ ಗಳನ್ನು ಖಂಡಿಸಿ ಸಿಐಟಿಯು ತಾಲ್ಲೂಕು ಸಮಿತಿ ವತಿಯಿಂದ ನಗರದ ಮಹಾವೀರ ವೃತ್ತದಲ್ಲಿ ಸೋಮವಾರ ಸಾರ್ವಜನಿಕರಿಂದ ಸಾಮೂಹಿಕ ಸಹಿ ಸಂಗ್ರಹ ಚಳುವಳಿ ನಡೆಸಲಾಯಿತು.

ಈ ಸಂದರ್ಭದಲ್ಲಿ ಡಿವೈಎಫ್ಐ ಮುಖಂಡರಾದ ಎಂಜಿ.ಪೃಥ್ವಿ ಅವರು ಮಾತನಾಡಿ, ರಾಜ್ಯ ಸರ್ಕಾರವು ಕಾರ್ಮಿಕರಿಗೆ ಕನಿಷ್ಠ ವೇತನವನ್ನು 7 ವರ್ಷ ಕಳೆದರೂ ಇದುವರೆಗೂ ಪರಿಷ್ಕರಣೆ ಮಾಡಿಲ್ಲ. ಈ ಹಿಂದೆ ಇದ್ದ ಬಿಜೆಪಿ ಸರ್ಕಾರವು ಸರ್ವೋಚ್ಚ ನ್ಯಾಯಾಲಯದ ಮಾರ್ಗ ಸೂಚಿಗಳನ್ನು ಉಲ್ಲಂಘಿಸಿ ಅವೈಜ್ಞಾನಿಕವಾಗಿ ವೇತನ ಪರಿಷ್ಕರಣೆ ಮಾಡಿತ್ತು. ಇದನ್ನು ಕರ್ನಾಟಕ ಉಚ್ಚ ನ್ಯಾಯಾಲಯವು ರದ್ದುಗೊಳಿಸಿ, ವೈಜ್ಞಾನಿಕವಾಗಿ ವೇತನ ನಿಗದಿಪಡಿಸುವಂತೆ ಆದೇಶ ನೀಡಿದ್ದರೂ ಸರ್ಕಾರ ವಿಳಂಬ ನೀತಿ ಅನುಸರಿಸುತ್ತಿದೆಂದು ಆರೋಪಿಸಿದರು.



ರಾಜ್ಯದಲ್ಲಿ ಅನುಸೂಚಿತ ಉದ್ದಿಮೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಸರ್ವೋಚ್ಚ ನ್ಯಾಯಾಲಯದ ಮಾರ್ಗ ಸೂಚಿಯಂತೆ ತಿಂಗಳಿಗೆ 36 ಸಾವಿರ ಕನಿಷ್ಠ ವೇತನ ನಿಗದಿಪಡಿಸಿ ಅಧಿಸೂಚನೆ ಹೊರಡಿಸಬೇಕೆಂದು ಸಿಐಟಿಯು ನಡೆಸಿದ ರಾಜ್ಯವ್ಯಾಪಿ ತೀವ್ರ ಪ್ರತಿಭಟನೆಯ ಭಾಗವಾಗಿ 2025ರ ಏಪ್ರಿಲ್ 11 ರಂದು ರಾಜ್ಯ ಸರ್ಕಾರವು ಕರಡು ಅಧಿಸೂಚನೆಯನ್ನು ಹೊರಡಿಸಿತ್ತಾದರೂ, ಅದು ಸರ್ವೋಚ್ಚ ನ್ಯಾಯಾಲಯದ ಮಾರ್ಗಸೂಚಿಗಳಿಗೆ ಅನುಗುಣವಾಗಿಲ್ಲ ಎಂದು ಹೇಳಿದರು.

ಕಾರ್ಮಿಕರ ಕುಟುಂಬಗಳಿಗೆ ಒಂದು ತಿಂಗಳಿಗೆ ತಗಲುವ ಅಗತ್ಯ ಆಹಾರ ಪದಾರ್ಥಗಳು ಮತ್ತು ಅಗತ್ಯ ವಸ್ತುಗಳ ವೆಚ್ಚ, ಮನೆ ಬಾಡಿಗೆ, ಶಿಕ್ಷಣ, ಆರೋಗ್ಯ, ಇಂಧನ, ಮನರಂಜನೆ ಇತ್ಯಾದಿಗಳ ಪೂರೈಕೆಗಾಗಿ ಪ್ರಸ್ತುತ ಮಾರುಕಟ್ಟೆಯ ಬೆಲೆಗಳ ಆಧಾರದಲ್ಲಿ ತಗುಲುವ ವೆಚ್ಚಗಳಿಗೆ ಅನುಗುಣವಾಗಿ ಕಾರ್ಮಿಕರಿಗೆ ಕನಿಷ್ಠ ವೇತನ ನಿಗದಿಪಡಿಸಬೇಕೆನ್ನುವ ಸುಪ್ರೀಂ ಕೋರ್ಟ್ ಮಾರ್ಗಸೂಚಿಗಳ ಅನ್ವಯ ಕಾರ್ಮಿಕರಿಗೆ ವೈಜ್ಞಾನಿಕ ಕನಿಷ್ಠ ವೇತನ ನಿಗದಿಪಡಿಸಬೇಕೆನ್ನುವುದು ಸಿಐಟಿಯು ಒತ್ತಾಯವಾಗಿದೆ ಎಂದರು.

ಕೇಂದ್ರದ ಬಿಜೆಪಿ ಸರ್ಕಾರವು 29 ಕಾರ್ಮಿಕ ಕಾನೂನುಗಳನ್ನು ರದ್ದುಗೊಳಿಸಿ ಜಾರಿಗೆ ತಂದಿರುವ 4 ಹೊಸ ಕಾರ್ಮಿಕ ಸಂಹಿತೆಗಳು ಕಾರ್ಮಿಕರನ್ನು ಗುಲಾಮಗಿರಿಗೆ ತಳ್ಳುತ್ತಿವೆ. ಕೆಲಸದ ಅವಧಿ ಹೆಚ್ಚಳ, ಮುಷ್ಕರ ಮಾಡುವ ಹಕ್ಕಿನ ನಿರಾಕರಣೆ ಮತ್ತು ಸಾಮಾಜಿಕ ರಕ್ಷಣಾ ಯೋಜನೆಗಳ ದುರ್ಬಲಗೊಳಿಸುವಿಕೆಯನ್ನು ಸಿಐಟಿಯು ತೀವ್ರವಾಗಿ ಖಂಡಿಸಿದೆ. ಗುತ್ತಿಗೆ ಪದ್ಧತಿಯನ್ನು ರದ್ದುಗೊಳಿಸಿ, ಎಲ್ಲಾ ಖಾಯಮೇತರ ಕಾರ್ಮಿಕರನ್ನು ಖಾಯಂಗೊಳಿಸಬೇಕು ಮತ್ತು ಸೊಸೈಟಿ ಮಾದರಿ ನೇಮಕಾತಿಯನ್ನು ಕೈಬಿಡಬೇಕೆಂದು ಒತ್ತಾಯಿಸಿದರು.

ರಾಜ್ಯಾದ್ಯಂತ ಅಂಬೇಡ್ಕರ್ ಜನ್ಮ ದಿನವಾದ ಏ.14 ರಿಂದ ಆರಂಭವಾಗಿರುವ ಸಾಮೂಹಿಕ ಸಹಿ ಸಂಗ್ರಹ ಚಳುವಳಿಯು ನಡೆಯುತ್ತಿದೆ. ರಾಜ್ಯ ಸರ್ಕಾರವು ಕಾರ್ಮಿಕರ ಈ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ಮೇ 30 ರಂದು ರಾಜ್ಯಾದ್ಯಂತ ಎಲ್ಲಾ ಜಿಲ್ಲಾಧಿಕಾರಿಗಳ ಕಚೇರಿಗಳಿಗೆ ಮುತ್ತಿಗೆ ಹಾಕಿ ಬೃಹತ್ ಪ್ರತಿಭಟನೆ ನಡೆಸಲು ಸಿಐಟಿಯು ರಾಜ್ಯ ಸಮಿತಿ ತೀರ್ಮಾನಿಸಿದೆ ಎಂದು ಎಚ್ಚರಿಕೆ ನೀಡಿದರು. ಸಿಐಟಿಯು ತಾಲ್ಲೂಕು ಮುಖಂಡರಾದ ಟಿ.ಹೆಚ್.ಜಯಂತಿ, ಮೀನಾಕ್ಷಿ, ಪ್ರಕಾಶ್, ಅರವಿಂದ, ಕುಮಾರ್, ನಾಗ ರತ್ನ, ನಿಂಗಮ್ಮ, ವನಜಾಕ್ಷಿಹಾಗು ಕಾರ್ಮಿಕ ಮುಖಂಡರು ಉಪಸ್ಥಿತರಿದ್ದರು.

# ದೇವೇಗೌಡರ ಜೀವನ-ರಾಜಕೀಯವೇ ರೋಚಕ

• ಪ್ರಜೋದಯ ವರದಿ

**ಬೇಲೂರು:** ಮಣ್ಣಿನ ಮಗ, ದೇಶದ ಹಿರಿಯ ಮುತ್ಸದ್ದಿ ರಾಜಕಾರಣಿ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಜನ್ಮದಿನದ ಅಂಗವಾಗಿ ಪಟ್ಟಣದ ಶ್ರೀ ಚನ್ನಕೇಶವ ದೇವಾಲಯದಲ್ಲಿ ಜೆಡಿಎಸ್ ಮಾಜಿ ಶಾಸಕ ಕೆ.ಎಸ್.ಲಿಂಗೇಶ್ ಮತ್ತು ಹೆಚ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಎಂ.ಎ.ನಾಗರಾಜು ನೇತೃತ್ವದಲ್ಲಿ ಕಾರ್ಯಕರ್ತರು ವಿಶೇಷ ಪೂಜೆ ಸಲ್ಲಿಸಿದರು.

ಮಾಜಿ ಶಾಸಕ ಕೆ.ಎಸ್.ಲಿಂಗೇಶ್ ಅವರು ಮಾತನಾಡಿ, ಮಾಜಿ ಪ್ರಧಾನ ಮಂತ್ರಿ ಹೆಚ್.ಡಿ. ದೇವೇಗೌಡ ಅವರು ದೇಶ ಕಂಡ ಅಪರೂಪದ ರಾಜಕಾರಣಿಗಳಲ್ಲಿ ಒಬ್ಬರು. ಸರಳತೆ, ಪ್ರಾಮಾಣಿಕತೆ ಹಾಗೂ ರೈತರ ಪರ ಕಾಳಜಿಯಿಂದ ಜನಮನ ಗೆದ್ದ ನಾಯಕರಾಗಿದ್ದಾರೆ. ರಾಜಕೀಯ ಜೀವನದಲ್ಲಿ ಅನೇಕ ಹುದ್ದೆಗಳನ್ನು ಅಲಂಕರಿಸಿದರೂ ಸಾಮಾನ್ಯ ಜನರೊಂದಿಗೆ ಬೆರೆತು ಬದುಕುತ್ತಿರುವ ಗೌಡರು ಯುವ ರಾಜಕಾರಣಿಗಳಿಗೆ ಪ್ರೇರಣೆಯಾಗಿದ್ದಾರೆ. ಅವರ ಹುಟ್ಟುಹಬ್ಬದ ಅಂಗವಾಗಿ ಚನ್ನಕೇಶವ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ, ಆರೋಗ್ಯ ಮತ್ತು ದೀರ್ಘಾಯುಷ್ಯ ದೊರಕಲೆಂದು ಪ್ರಾರ್ಥಿಸಲಾಗಿದೆ ಎಂದು ತಿಳಿಸಿದರು.



ಹೆಚ್.ಡಿ.ಸಿ.ಸಿ. ಬ್ಯಾಂಕ್ ಜಿಲ್ಲಾ ನಿರ್ದೇಶಕ ಎಂ.ಎ.ನಾಗರಾಜ್ ಅವರು ಮಾತನಾಡಿ, ಮಾಜಿ ಪ್ರಧಾನ ಮಂತ್ರಿ ಹೆಚ್.ಡಿ.ದೇವೇಗೌಡ ಅವರು ರಾಜ್ಯ ಹಾಗೂ ದೇಶದ ರಾಜ ಕೀಯದಲ್ಲಿ ಅಪಾರ ಅನುಭವ ಹೊಂದಿರುವ ಹಿರಿಯ ನಾಯಕರು. ರೈತರು, ಬಡವರು ಹಾಗೂ ಸಾಮಾನ್ಯ ಜನರ ಪರವಾಗಿ ಸದಾ ಧ್ವನಿಯಾಗಿ ರುವ ಗೌಡರು ಎಲ್ಲರಿಗೂ ಆದರ್ಶ ವ್ಯಕ್ತಿಯಾಗಿದ್ದಾರೆ. ಮುಂದಿನ ದಿನಗಳಲ್ಲಿಯೂ ಅವರ ಮಾರ್ಗದರ್ಶನ ರಾಜ್ಯ ಹಾಗೂ ದೇಶಕ್ಕೆ ಅಗತ್ಯವೆಂದರು.

ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಬಿ.ಡಿ.ಚಂದ್ರೇಗೌಡ, ಟಿಎಪಿಸಿಎಂಎಸ್ ಅಧ್ಯಕ್ಷ ಮಲ್ಲೇಶ್‌ಗೌಡ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ದಿನೇಶ್, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಬಾಣಸವಳ್ಳಿ ಅಶ್ವಥ್, ಕಾಚೀಹಳ್ಳಿ ದಿಲೀಪ್, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಅಬ್ದುಲ್ ಸುಭಾನ್, ಟಿ.ಎ.ಪಿ.ಸಿ.ಎಂ.ಎಸ್. ಮಾಜಿ ಅಧ್ಯಕ್ಷ ಬಲ್ಲೇನಹಳ್ಳಿ ರವಿಕುಮಾರ್, ಲೋಕೇಗೌಡ, ಧರ್ಮಣ್ಣ, ಯಾದವ ಸಂಘದ ನಾಗೇಶ್, ಗಾಯಕ ರಾಮು ಇತರರು ಹಾಜರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK